
ಕರ್ನಾಟಕ ಸರ್ಕಾರ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

ಮಂಗಳೂರು



ಕೊಂಕಣಿ ಅಕಾಡೆಮಿಯ ಮೂರು ವರುಷಗಳ ಸಾಧನೆ

(1996 – 1998)

ಕರ್ನಾಟಕ ಸರಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
ಸಚಿವರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಶ್ರೀ ಅ. ರಾ. ಚಂದ್ರಹಾಸ ಗುಪ್ತ, ಐ.ಎ.ಎಸ್.
ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ವೈ. ಕೆ. ಮುದ್ದು ಕೃಷ್ಣ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಶ್ರೀ ಕಾ. ತ. ಚಿಕ್ಕಣ್ಣ
ಸಹ ನಿರ್ದೇಶಕರು (ಆಡಳಿತ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಶ್ರೀ ಹಿಂ. ರಾ. ಹೊನ್ನಲಿಂಗಯ್ಯ
ಸಹ ನಿರ್ದೇಶಕರು (ಕಾರ್ಯಕ್ರಮ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು.

ಸಂಪಾದಕೀಯ ಮಂಡಳಿ

ಶ್ರೀ ಬಸ್ತಿ ವಾಮನ ಶೆಣೈ
ಶ್ರೀ ಸಿರಿಲ್ ಜಿ. ಸಿಕ್ವೇರಾ
ಶ್ರೀಮತಿ ಮೇರಿ ಡಿ'ಸಿಲ್ವಾ

ಸಹಕಾರ

ಶ್ರೀ ಎಚ್. ಸಿ. ರಂಗಪ್ಪ
ಪ್ರಭಾರ ರಿಜಿಸ್ಟ್ರಾರ್

ಪ್ರಕಾಶಕರು

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ
ಮಂಗಳೂರು ಮಹಾನಗರಪಾಲಿಕೆ ಕಟ್ಟಡ
ಲಾಲ್‌ಭಾಗ್, ಮಂಗಳೂರು – 575 003

ಮುದ್ರಣ

ಕೊಡಿಯಾಲ್‌ಬೈಲ್ ಪ್ರೆಸ್
ಮಂಗಳೂರು – 575 003

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ರಾಜ್ಯದ ಘನ ಸರಕಾರವು ರಾಜ್ಯದಲ್ಲಿರುವ ಸುಮಾರು 25 ಲಕ್ಷ ಕೊಂಕಣಿಗಳ ಮಾತೃಭಾಷೆಯಾಗಿರುವ ಕೊಂಕಣಿ ಭಾಷೆಯ ಸಾಹಿತ್ಯ ಸಂಗೀತ, ಕಲೆ, ಜಾನಪದ ಕ್ಷೇತ್ರಗಳ ಅಭಿವೃದ್ಧಿಗಾಗಿ, ಕೊಂಕಣಿಗಳ ಹಲವು ವರ್ಷಗಳ ಬೇಡಿಕೆಯನ್ನು ಪೂರೈಸಲು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಘೋಷಿಸಿತು. ಇದರಿಂದಾಗಿ ನಮ್ಮ ನಾಡಿನ ವಿವಿಧ ಜಿಲ್ಲೆ, ತಾಲೂಕುಗಳಲ್ಲಿ ಕೊಂಕಣಿಗಳ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನಾಟಕ ಇತ್ಯಾದಿ ಚಟುವಟಿಕೆಗಳನ್ನು ಹೆಚ್ಚೆಚ್ಚಾಗಿ ಹಮ್ಮಿಕೊಳ್ಳಲು ಕೊಂಕಣಿಗಳಿಗೆ ಸಾಧ್ಯವಾಯಿತು.

ಕೊಂಕಣಿ ಅಕಾಡೆಮಿಯನ್ನು ಎರಡನೇಯ ಬಾರಿಗೆ 5-10-1995ರಂದು ವಯೋವೃದ್ಧ, ಜ್ಞಾನವೃದ್ಧ, 'ಕೊಂಕಣಿ ಕಳಿಂ' ಶ್ರೀ ಬಿ. ವಿ. ಬಾಳಿಗಾರ ಅಧ್ಯಕ್ಷತೆಯಲ್ಲಿ ಘೋಷಿಸಿದಾಗ, ಅಕಾಡೆಮಿಗೆ ಕಚೇರಿಗಾಗಿ ತನ್ನದೇ ಆದ ಕಟ್ಟಡವಾಗಲೀ ಸಿಬಂಧಿಯಾಗಲೀ ಸಿಗಲಿಲ್ಲ ಅಂತಹ ಪರಿಸ್ಥಿತಿಯಲ್ಲಿ ತನ್ನ ಮಾತೃಭಾಷೆ ಕೊಂಕಣಿಯ ಮೇಲಿನ ಅಭಿಮಾನ ಪ್ರೀತಿಗಳಿಂದ, ಮಂಗಳೂರಿನ ಕೊಡುಗೈದಾನಿ ಶ್ರೀ ಎಂ. ರಘುನಾಥ ಶೇಟ್‌ರವರು ತನ್ನ ನವರತ್ನ ಪೇಲೆಸ್‌ನಲ್ಲಿ ಜಾಗವನ್ನು ಕೊಟ್ಟು ಉಪಕರಿಸಿದರು. ಅದರಂತೆಯೇ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ತಮ್ಮ ಮಂಗಳೂರು ಜಿಲ್ಲೆಯ ಸಹಾಯಕ ನಿರ್ದೇಶಕರನ್ನು ರಿಜಿಸ್ಟ್ರಾರ್ ಹುದ್ದೆಗಾಗಿ ಪ್ರಭಾರಿ ನೆಲೆಯಲ್ಲಿ ಒದಗಿಸಿದ್ದರಿಂದ ಕೊಂಕಣಿ ಅಕಾಡೆಮಿ ತನ್ನ ಕಾರ್ಯಕಲಾಪಗಳನ್ನು ಮೊದಲು ಮಾಡಲು ಅನುಕೂಲವಾಯಿತು. ಬಳಿಕ ಅಗತ್ಯವುಳ್ಳ ಸಿಬಂಧಿಗಳನ್ನು ಸರಕಾರದ ವತಿಯಿಂದ ಸಿಗದ್ದರಿಂದ ತಾತ್ಕಾಲಿಕ ನೆಲೆಯಲ್ಲಿ ನೇಮಿಸಲಾಯಿತು. ಈ ಹಲವಾರು ಅಡಚಣೆಗಳಿಂದಾಗಿ ನಾವು ನಿರೀಕ್ಷಿಸಿದಷ್ಟು ಕೆಲಸ ಕಾರ್ಯಗಳನ್ನು ಪೂರೈಸಲು ಪ್ರಾರಂಭಿಕ ತೊಡಕುಗಳು ಎದುರಾದವು.

ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಮಾತಾಡುವ ಜನರು ಹಲವಾರು ಜಿಲ್ಲೆಗಳಲ್ಲಿ ಪಸರಿಸಿರುವುದರಿಂದ ಭೌಗೋಳಿಕವಾಗಿ ಕೊಂಕಣಿ ಅಕಾಡೆಮಿಯ ಕಾರ್ಯವ್ಯಾಪ್ತಿ ವಿಸ್ತಾರವಾಗಿರುವುದು. ಅದರಿಂದಾಗಿ ಕೊಂಕಣಿ ಅಕಾಡೆಮಿಯ ಕಾರ್ಯಕ್ರಮಗಳು ಅಲ್ಲಲ್ಲಿನ ಕೊಂಕಣಿಗಳ ಹೃನ್ಮನಗಳಲ್ಲಿ ನೆಲಸುವಂತಾಗಲು ಅವಶ್ಯವಾದ ಹೆಜ್ಜೆಗಳನ್ನು ಊರಲು ಹೆಚ್ಚಿನ ಪರಿಶ್ರಮ ಬೇಕಾಗಿದೆ. ಅಲ್ಲದೇ ಕೊಂಕಣಿ ಅಕಾಡೆಮಿಯ ಸದಸ್ಯರು ಹಲವಾರು ಪ್ರದೇಶಗಳಿಂದ ಹಾಗೂ ಕೊಂಕಣಿಯಲ್ಲಿ ಹಲವಾರು ಉಪಭಾಷೆಗಳನ್ನಾಡುವವರೂ ಆಗಿದ್ದರಿಂದ ಅವರೆಲ್ಲರೂ ಒಮ್ಮನಸ್ಸಿನಿಂದ ಒಂದೇ ಧ್ಯೇಯೋದ್ದೇಶಗಳ ಬದ್ಧತೆಯಿಂದ ಕೆಲಸ ಮಾಡುವುದು ಅಗತ್ಯದ್ದಾಗಿದೆ. ಈ ಬದ್ಧತೆಗಳೆಂದರೆ, ಕೊಂಕಣಿ ಸಾಹಿತ್ಯ ಸಂಸ್ಕೃತಿ ಕಲೆ, ಸಂಗೀತ ನಾಟಕ ಜಾನಪದಗಳ ಅಭಿವೃದ್ಧಿಗೆ, ರಾಜ್ಯದ ವಿವಿಧೆಡೆಗಳಲ್ಲಿ ಹಾಗೂ ಅಲ್ಲಲ್ಲಿನ ಕೊಂಕಣಿ ಸಂಘ ಸಂಸ್ಥೆಗಳು ಸಾಹಿತಿಗಳು ಸಾಂಸ್ಕೃತಿಕ ರಂಗಗಳಲ್ಲಿ ಮತ್ತು ಜಾನಪದ ಇತ್ಯಾದಿ ಕ್ಷೇತ್ರಗಳಲ್ಲಿ

ದುಡಿಯುವ ಕಲಾವಿದರುಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ಮತ್ತು ಈ ಬದ್ಧತೆಗಳಿಂದ ಕೊಂಕಣಿ ಭಾಷೆಯ ಮತ್ತು ಭಾಷಿಕರ ಸರ್ವಾಂಗೀಣ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ಕಳೆದ ಮೂರು ವರ್ಷಗಳಲ್ಲಿ ಕೊಂಕಣಿ ಅಕಾಡೆಮಿ ಕೆಲಸ ಮಾಡಿದೆ; ಎಂಬ ವಿಶ್ವಾಸ ನಮಗಿದೆ.

ಈಗಾಗಲೇ ಕೊಂಕಣಿ ಅಕಾಡೆಮಿ ಹಮ್ಮಿಕೊಂಡ ಕಾರ್ಯಕ್ರಮಗಳು, ಯೋಜನೆಗಳು, ಮತ್ತು ಕಾರ್ಯವಿಧಾನಗಳು ಎಲ್ಲರ ಶ್ಲಾಘನೆಗೆ ಪಾತ್ರವಾಗಿವೆ. ಆದರೂ ಸರಕಾರದಿಂದ ಹೆಚ್ಚಿನ ಅನುದಾನಗಳು ಸಿಕ್ಕಿದಲ್ಲಿ ಇನ್ನೂ ಹಲವಾರು ಸಾಹಿತಿಕ, ಸಾಂಸ್ಕೃತಿಕ, ಕಲಾ, ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿತ್ತು ಎಂಬ ಅತೃಪ್ತಿ ಸದಸ್ಯರಲ್ಲಿತ್ತು.

ಗೋವಾ ಮತ್ತು ಕರ್ನಾಟಕ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಚ್ಚಿನ ತಿಳುವಳಿಕೆ ವಿಶ್ವಾಸ ಮೂಡಿಸಲು ಕೊಂಕಣಿ ಅಕಾಡೆಮಿ ಪ್ರಾಯೋಜಿಸಿದ ಅಂತರ್‍ರಾಜ್ಯ 'ಸೇತು' ಯೋಜನೆ ಬೆಂಗಳೂರು ಮತ್ತು ನವದೆಹಲಿಗಳಲ್ಲಿ ಜರುಗಿಸಿದ ಹೆಮ್ಮೆಯ 'ಕೊಂಕಣಿ ಕಲಾ ಉತ್ಸವ'ಗಳು ಮತ್ತು 'ತುಳು ಕನ್ನಡ ಕೊಂಕಣಿ ಭಾಷಾ ಬಾಂಧವ್ಯಗಳು,' ಸಾಹಿತ್ಯ ಗೋಷ್ಠಿಗಳು, ಕವಿಗೋಷ್ಠಿ ಮುಂತಾದ ಕಾರ್ಯಕ್ರಮಗಳು ಈ ಮೂರು ವರ್ಷಗಳ ಹೆಮ್ಮೆಯ ಸಾಧನೆಗಳು ಎಂದು ನನಗನಿಸುತ್ತದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಮಾನ್ಯ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಅ. ರಾ. ಚಂದ್ರಹಾಸ ಗುಪ್ತ, ನಿರ್ದೇಶಕರಾದ ಮಾನ್ಯ ಶ್ರೀ ವೈ. ಕೆ. ಮುದ್ದುಕೃಷ್ಣ ಇವರುಗಳಿಂದ ಉತ್ತಮ ಸಹಾಯ, ಸಹಕಾರ, ಮಾರ್ಗದರ್ಶನಗಳು ಅನೂಚನವಾಗಿ ಲಭಿಸುತ್ತಲೇ ಇವೆ. ಅವರಿಗೆ ನಾವು ಋಣಿಗಳು.

ಕೊಂಕಣಿ ಅಕಾಡೆಮಿಯ ಅಧ್ಯಕ್ಷರು ಮತ್ತು ಗೌರವಾನ್ವಿತ ಸದಸ್ಯರುಗಳು ಈ ಮೂರು ವರುಷಗಳಲ್ಲಿ ಎಲ್ಲಾ ನಿರ್ಣಯಗಳನ್ನು ಸರ್ವ ಸಮ್ಮತಿಯಿಂದ ಕೈಗೊಂಡಿರುತ್ತಾರೆ. ಅಕಾಡೆಮಿಯ ಸದಸ್ಯರ ಮತ್ತು ರಿಜಿಸ್ಟ್ರಾರ್, ಸಿಬ್ಬಂದಿಗಳ ಸಹಕಾರವು ನನಗೆ ನಿರಂತರವಾಗಿ ದೊರೆಯುತ್ತಿರುವುದನ್ನು ನಾನು ಇಲ್ಲಿ ನೆನಪಿಸಲೇ ಬೇಕಾಗುತ್ತದೆ. ಇವರೆಲ್ಲರಿಗೆ ಅಕಾಡೆಮಿ ಋಣಿಯಾಗಿದೆ.

ದೇವು ಬರೆಂ ಕೊರೊ.

ಮಂಗಳೂರು
ದಿನಾಂಕ : 15-3-1999

– ಬಸ್ತಿ ವಾಮನ ಶೆಣೈ
ಅಧ್ಯಕ್ಷ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮೂರು ವರ್ಷಗಳ ಸಾಧನೆ 1996 – 1998

ಸುಮಾರು 25 ಲಕ್ಷ ಕೊಂಕಣಿಗರು ವಾಸಿಸುವ ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಭಾಷೆ ಮಾತನಾಡುವ ಜನರಿಗೆ ಕೊಂಕಣಿ ಸಾಹಿತ್ಯ, ಸಂಸ್ಕೃತಿ ಕಲೆ, ಜಾನಪದಗಳನ್ನು ಅಭಿವೃದ್ಧಿಗೊಳಿಸಲು, ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಕಾರ್ಯವ್ಯಾಪ್ತಿಯ ಅಧಿಕಾರದಡಿಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಿದೆ. ಈ ಕೊಂಕಣಿ ಸಾಹಿತ್ಯ ಅಕಾಡೆಮಿಯಲ್ಲಿ ಮಾನ್ಯ ಅಧ್ಯಕ್ಷರೊಂದಿಗೆ ಹನ್ನೊಂದು ಮಂದಿ ಸದಸ್ಯರಿರುತ್ತಾರೆ. ಮತ್ತು ಇಬ್ಬರನ್ನು ಅಕಾಡೆಮಿಯ ಸಹ ಸದಸ್ಯರನ್ನಾಗಿ ನೇಮಿಸುವ ಅವಕಾಶವಿದೆ.

ಈ ಹದಿನೆರಡು ಸದಸ್ಯರು ಮಾನ್ಯ ಅಧ್ಯಕ್ಷರೊಂದಿಗೆ ಸೇರಿ ಪ್ರಸ್ತುತ ಸಾಲಿನಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆ, ಮತ್ತು ಜಾನಪದ ಕ್ಷೇತ್ರಗಳಲ್ಲಿಯ ಉತ್ತಮ ಸಾಧನೆಗಳಿಗೆ ಒಂದು ವರ್ಷಕ್ಕೆ ಖರ್ಚಾಗುವ ಅಂದಾಜು ಪಟ್ಟಿ ತಯಾರಿಸಿ ಸರಕಾರಕ್ಕೆ ಕಳುಹಿಸಿಕೊಡುತ್ತಾರೆ. ತದನಂತರ ಸರಕಾರವು ಅಕಾಡೆಮಿಯ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ವರುಷದಲ್ಲಿ ಎರಡು ಕಂತಿನಲ್ಲಿ ಅನುದಾನ ನೀಡುತ್ತದೆ. ಸರಕಾರವು ನೀಡಿದ ಅನುದಾನದಲ್ಲಿ ಕಚೇರಿ ಬಾಡಿಗೆ, ವಿದ್ಯುತ್, ಕಚೇರಿ ಅಧಿಕಾರಿ ಸಿಬ್ಬಂದಿಯವರಿಗೆ ವೇತನ ಮತ್ತು ಇತರ ಅಂದರೆ ಯೋಜನೇತರ ಬಾಬ್ತುಗಳಿಗೆ ಖರ್ಚುಗಳನ್ನು ಕಳೆದು ಉಳಿದ ಹಣದಲ್ಲಿ ಯೋಜನೆ ಮೀಸಲಾಗಿಟ್ಟು, ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಪ್ರಥಮವಾಗಿ ಆರಂಭಗೊಂಡ ಅಕಾಡೆಮಿಯ ಮೊದಲನೇ ಸಭೆಯನ್ನು ದಿನಾಂಕ 1–3–1996ರಂದು ಬೆಳಿಗ್ಗೆ 10.30ಕ್ಕೆ ವಿಶ್ವಕೊಂಕಣಿ ಸಮ್ಮೇಳನದ ಕಚೇರಿ, ನವರತ್ನ ಕಾಂಪ್ಲೆಕ್ಸ್, ಮಂಗಳೂರು – ಇಲ್ಲಿ ತನ್ನ ಸರ್ವ ಸದಸ್ಯರ ಸಭೆಯನ್ನು ಏರ್ಪಡಿಸಲಾಯಿತು.

ಅಧ್ಯಕ್ಷರು : ಶ್ರೀ ಬಿ. ವಿ. ಬಾಳಿಗಾ

ಸದಸ್ಯರು : 1. ಶ್ರೀ ಎಸ್. ಎಸ್. ವರ್ಣೇಕರ್

2. ಶ್ರೀ ಜುಬೇರ ಮುಸುಬಾ

3. ಶ್ರೀ ಎರಿಕ್ ಒಜಾರಿಯೋ

4. ಶ್ರೀ ವಲೇರಿಯನ್ ಡಿ'ಸೋಜಾ
5. ಶ್ರೀ ಜೀವನ್‌ದಾಸ್ ಖಾರ್ವಿ
6. ಶ್ರೀ ಮಿಂಗೇಲ್ ಅಂತೋನಿ ಸಿದ್ಧಿ
7. ಶ್ರೀ ಬಸ್ತಿ ವಾಮನ ಶೆಣೈ
8. ಶ್ರೀ ಗೋಪಾಲ ಗೌಡ
9. ಶ್ರೀ ಎ. ಎಸ್. ಸೋಂದೆ
10. ಶ್ರೀಮತಿ ಲತಾ ಯು. ಪೈ
11. ಫಾ| ಮಾರ್ಕ್ ವಾಲ್ಡರ್
12. ಪ್ರೊ| ಎಲ್. ಎ. ಅಂದ್ರಾದೆ
13. ಶ್ರೀ ಅರುಣ್ ಎಸ್. ಉಭಯಕರ್

ಪ್ರಾರಂಭದಲ್ಲಿ ಪ್ರಭಾರ ರಿಜಿಸ್ಟ್ರಾರ್ ಆಗಿ ಶ್ರೀ ಬಿ. ಜಿ. ನಾಯಕ್, ನಂತರ ಶ್ರೀ ದಾಸೇಗೌಡ ತದನಂತರ ಶ್ರೀ ಎಂ. ಎಸ್. ಚಂದ್ರಪ್ಪ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದು ಕೊಂಕಣಿ ಅಕಾಡೆಮಿಯಲ್ಲಿ ಪ್ರಭಾರ ರಿಜಿಸ್ಟ್ರಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ.


ಅಕಾಡೆಮಿ ಸಾಧನೆ : ಸಾಹಿತ್ಯ ಕ್ಷೇತ್ರದಲ್ಲಿ

ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಹಮ್ಮಿಕೊಂಡಿರುವ ಯೋಜನೆಗಳು :

1. ಸಾಹಿತ್ಯ ಕಾರ್ಯಾಗಾರ
2. ಸಾಹಿತ್ಯ ಸಮ್ಮೇಳನ
3. ಸಾಹಿತ್ಯ ಕೃತಿ ಪುರಸ್ಕಾರ
4. ಸಾಹಿತ್ಯ ಪುಸ್ತಕ ಖರೀದಿ ಯೋಜನೆ
5. ಸಾಹಿತ್ಯ ಪುಸ್ತಕ ಪ್ರಕಟಣೆಗೆ ಅನುದಾನ
6. ಶಾಲಾ ಕಾಲೇಜುಗಳಲ್ಲಿ ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

1. ಸಾಹಿತ್ಯ ಕಾರ್ಯಾಗಾರ

ವಿದ್ಯಾಕ್ಷೇತ್ರದಲ್ಲಿ ಕೊಂಕಣಿ ಭಾಷಾ ಬಳಕೆಯ ಬಗ್ಗೆ ವಿಚಾರಗೋಷ್ಠಿ.



ಈ ಕಾರ್ಯಕ್ರಮವು ಕಾರವಾರದ ರೋಟರಿ ಸಭಾಗ್ರಹದಲ್ಲಿ ದಿನಾಂಕ 7–12–96 ಮತ್ತು 8–12–96ರಂದು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮಂಗಳೂರು ಮತ್ತು ಕೊಂಕಣಿ ಭಾಷಾ ಮತ್ತು ಸಾಂಸ್ಕೃತಿಕ ಕೇಂದ್ರ ಕಾರವಾರ ಇವರ ಸಹಯೋಗದಲ್ಲಿ ಜರುಗಿತು. ದಿನಾಂಕ 7–12–98ರಂದು ಶ್ರೀ ಎಸ್. ಎನ್. ಬೋರ್ಕರ್ ಇ. ಪಿ. ಎಸ್ (ಕಮಿಷನರ್ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಕರ್ನಾಟಕ ಸರ್ಕಾರ) ಇವರ ಉದ್ಘಾಟನೆಯೊಂದಿಗೆ ಶ್ರೀ ಎಂ. ಜಿ. ನಾಯಕ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಈ ಕಾರ್ಯಕ್ರಮಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಮತ್ತು ಅಖಿಲ ಭಾರತ ಕೊಂಕಣಿ ಪರಿಷತ್‌ನ ಅಧ್ಯಕ್ಷರಾದ ಡಾ। ವಿಲಿಯಂ ಮಾಡ್ತಾ ಅವರು ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಹಾಗೂ ಸುಮಾರು 100 ಜನ ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅಲ್ಲದೆ ಶಿಕ್ಷಣದಲ್ಲಿ ಕೊಂಕಣಿ ಭಾಷೆ ಬಳಕೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ದಿನಾಂಕ 8–12–96ರ ಸಮಾರೋಪ ಸಮಾರಂಭದ ಅಧ್ಯಕ್ಷರಾಗಿ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಮಣಿಪಾಲದ ಡಾ। ಎಚ್. ಶಾಂತರಾಮ್ ಮತ್ತು ಮುಖ್ಯ ಅತಿಥಿಗಳಾಗಿ

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ ಬಿ. ಸೋಮಶೇಖರ್‌ರವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಸಂಚಾಲಕರಾಗಿ ಅಕಾಡೆಮಿ ಸದಸ್ಯರಾದ ಪ್ರೊ| ಎಲ್. ವಿ. ಅಂದ್ರಾದೆಯವರು ಕಾರ್ಯ ನಿರ್ವಹಿಸಿರುತ್ತಾರೆ. ಹಾಗೂ ಹಾರ್ಸಿಕಟ್ಟಾ, ಸಿದ್ಧಾಪುರ ಶ್ರೀ ವಿಶ್ವನಾಥ ಶೇಟ್ ನೇತೃತ್ವದ ಮೇಳದವರಿಂದ ಕೊಂಕಣಿ ಯಕ್ಷಗಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.


ಕುಮಟಾದಲ್ಲಿ ಕೊಂಕಣಿ ಸಾಹಿತ್ಯ ಗೋಷ್ಠಿ

ದಿನಾಂಕ 2-3-97ರಂದು ಕುಮಟಾದಲ್ಲಿ ಬೆಳಿಗ್ಗೆ 10.00 ಗಂಟೆಗೆ ಕಾರವಾರ ಆಕಾಶವಾಣಿ ಕೇಂದ್ರದ ನಿರ್ದೇಶಕರಾದ ಶ್ರೀ ಚೇತನ್ ಕುಮಾರ್ ನಾಯಕರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸ್ತಿ ವಾಮನ ಶೆಣೈ ವಹಿಸಿದ್ದರು ಹಾಗೂ ಮುಖ್ಯ ಅತಿಥಿಯಾಗಿ ಖ್ಯಾತ ಕೊಂಕಣಿ ನಾಟಕಕಾರ ಧಾರವಾಡದ ಹೇರಂಜಾಳ ಗಜಾನನ ರಾವ್ ಉಪಸ್ಥಿತರಿದ್ದರು.

ಲಘು ಕಥಾ ಕಾರ್ಯಾಗಾರ : ಈ ಕಾರ್ಯಾಗಾರ ಅಕಾಡೆಮಿಯ ಸದಸ್ಯ ಹಾಗೂ ಖ್ಯಾತ ಲೇಖಕ ಶ್ರೀ ವಲೇರಿಯನ್ ಡಿ'ಸೋಜಾ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾರ್ಯಾಗಾರದಲ್ಲಿ 8 ಮಂದಿ ಸಾಹಿತಿಗಳು ವಿಮರ್ಶಾತ್ಮಕ ಉಪನ್ಯಾಸ ಮಾಡಿದರು.

ಕೊಂಕಣಿ ಕವಿ ಗೋಷ್ಠಿ : ಈ ಕಾರ್ಯಾಗಾರದ ಅಂಗವಾಗಿ ಕೊಂಕಣಿ ಕವಿ ಗೋಷ್ಠಿಯನ್ನು ಸಿದ್ಧಾಪುರದ ಕವಿ ಕೆ. ವಿ. ಭಟ್ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಇದರಲ್ಲಿ ಹಾಸ್ಯ ವಿಡಂಬನಾ, ಭಕ್ತಿಪರ, ಪ್ರೇಮಗೀತ, ಹೀಗೆ ಅನೇಕ ನಮೂನೆಯ ಕವನಗಳನ್ನು ಸಾದರಪಡಿಸಲಾಯಿತು. ಈ ಕವಿಗೋಷ್ಠಿಯಲ್ಲಿ 18 ಜನ ಕವಿಗಳು ಅವರ ಸ್ವಂತ ರಚನೆಗಳನ್ನು ಪ್ರಸ್ತುತ ಪಡಿಸಿದರು.

ಸನ್ಮಾನ ಕಾರ್ಯಕ್ರಮ : ಶ್ರೀ ಬಸ್ತಿ ವಾಮನ ಶೆಣೈಯವರ ಅಧ್ಯಕ್ಷತೆಯಲ್ಲಿ ಕೊಂಕಣಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮೂವರು ಮಹಾನೀಯರಿಗೆ ಸನ್ಮಾನಿಸಲಾಯಿತು. ಕೊಂಕಣಿ ಭಾಷೆ ಮತ್ತು ಸಾಹಿತ್ಯದ ಸೇವೆ ಮಾಡಿದ ರಾಜ್ಯ ಪ್ರಶಸ್ತಿ ವಿಜೇತರಾದ ವಿದ್ಯಾದೀರಾಜ ಪ್ರಶಸ್ತಿ ಪುರಸ್ಕೃತ ಶಿರಸಿಯ ಶ್ರೀ ವಿ. ಎಸ್. ಸೋಂದೆ ಮತ್ತು ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ 34 ವರುಷಗಳಿಂದ ಕೊಂಕಣಿ ವಿಭಾಗದಲ್ಲಿ ಸೇವೆ ಸಲ್ಲಿಸಿದ ಶ್ರೀಮತಿ ಪ್ರಭಾ ಶಿರೂರ ಹಾಗೂ ಕೊಂಕಣಿ ಹಾಸ್ಯ ರಸಮಂಜರಿ ಕಲಾವಿದ ವಸಂತ ಬಾಂದೇಕರ್ ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ವಸಂತ ಬಾಂದೇಕರ್ ಇವರ ರಸಮಂಜರಿ ಹಾಗೂ ಯಲ್ಲಾಪುರದ ಸಿದ್ಧಿ ಜನಾಂಗದ ಸಿದ್ಧಿ ಜಾನಪದ ನೃತ್ಯ ಆಕರ್ಷಕವಾಗಿ ಪ್ರದರ್ಶಿತವಾಯಿತು. ಈ ಒಂದು ಅಪೂರ್ವವಾದ ಕಾರ್ಯಕ್ರಮವನ್ನು ವೀಕ್ಷಿಸಲು ನೂರಾರು ಜನ ಸೇರಿದ್ದರು.



ಈ ಕಾರ್ಯಕ್ರಮವು 1997ನೇ ಜುಲೈ 27ರಂದು ಬಂಟ್ವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಬೆಳಿಗ್ಗೆ 10.00 ಗಂಟೆಗೆ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಪ್ರಸಿದ್ಧ ಕನ್ನಡ–ತುಳು ಸಾಹಿತಿ ಇವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಸಾಹಿತಿ, ಹಾಗೂ ಸಾಮಾಜಿಕ ಕಾರ್ಯಕರ್ತರಾದ ಡಾ। ಅಮ್ಮೆಂಬಳ ಬಾಳಪ್ಪ ಇವರು ಮುಖ್ಯ ಅತಿಥಿಯಾಗಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಕೊಂಕಣಿ ಪರಿಷತ್ ಅಧ್ಯಕ್ಷ ಡಾ। ವಿಲಿಯಂ ಮಾಡ್ತಾ ಇವರು ವಹಿಸಿದ್ದರು. ಬೆಳಿಗ್ಗೆ 11.30ರಿಂದ ಮಧ್ಯಾಹ್ನ 1.30ರ ವರೇಗೆ ವಿಚಾರ ಗೋಷ್ಠಿ ಏರ್ಪಡಿಸಲಾಗಿತ್ತು. ಇದರಲ್ಲಿ ತುಳು–ಕೊಂಕಣಿ ಭಾಷಾ ಸಂಬಂಧ ವಿಷಯದ ಬಗ್ಗೆ ಶ್ರೀ ಎಂ. ಮುಕುಂದ ಪ್ರಭು, ತುಳು ಕೊಂಕಣಿ ಸಾಹಿತ್ಯ ಸಂಬಂಧದ ವಿಷಯದ ಬಗ್ಗೆ ಶ್ರೀ ಮುರಳೀಧರ ಉಪಾಧ್ಯ ಹಿರಿಯಡ್ಕ ಹಾಗೂ ತುಳು ಕೊಂಕಣಿ ಸಾಂಸ್ಕೃತಿಕ ಸಂಬಂಧ ಈ ವಿಷಯದ ಬಗ್ಗೆ ಸಂದೇಶ ಸಂಸ್ಥೆಯ ನಿರ್ದೇಶಕ ಫಾ। ಹೆನ್ರಿ ಡಿ'ಸೋಜಾ ಕಾರ್ಯಕ್ರಮದಲ್ಲಿ ಪ್ರಬಂಧ ಮಂಡಿಸಿದರು. ಈ ವಿಚಾರ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ। ಲೀಲಾ ಭಟ್ ಇವರು ವಹಿಸಿದ್ದರು.

ಮಧ್ಯಾಹ್ನ 2ರಿಂದ 2.30ರ ವರೆಗೆ ಕವಿಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಕವಿಗೋಷ್ಠಿಯಲ್ಲಿ ಶ್ರೀ ಈಶ್ವರ ಭಟ್ ಪುತ್ತಿಗೆ, ಶ್ರೀಮತಿ ವಸಂತಿ ಆರ್. ನಾಯಕ್

ಶ್ರೀಮತಿ ಕ್ಯಾಥರಿನ್ ರೊಡ್ರಿಗಸ್, ಶ್ರೀ ಮೌರಿಸ್ ಶಾಂತಿಪುರ, ಶ್ರೀ ತಿಲಕನಾಥ ಮಂಜೇಶ್ವರ, ಶ್ರೀ ಎಚ್. ರಾಘವೇಂದ್ರ ರಾವ್, ಶ್ರೀಮತಿ ದೇವಿಕಾ ನಾಗೇಶ್, ಶ್ರೀ ಆ್ಯನ್ಸಿ ಪಾಲಡ್ಕ, ಶ್ರೀ ಚಿದಂಬರ ಬೈಕಂಪಾಡಿ, ಶ್ರೀ ಜೊಸ್ಸಿ ಪಿಂಟೋ ಕಿನ್ನಿಗೋಳಿ ಇವರುಗಳು ತಮ್ಮ ಸ್ವರಚಿತ ಕವನಗಳನ್ನು ಓದಿದರು. ಈ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಕನ್ನಡ ಸಾಹಿತಿ, ಕವಿ ಶ್ರೀ ಬಿ. ಎಂ. ಇದಿನಬ್ಬ ಇವರು ವಹಿಸಿದ್ದರು. ಸಂಜೆ 3ರಿಂದ 4.30ರ ವರೆಗೆ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಸಮಾರೋಪ ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಪ್ರಸಿದ್ಧ ಹರಿದಾಸ ಶ್ರೀ ಭದ್ರಗಿರಿ ಅಚ್ಯುತ ದಾಸ್‌ಜೀ ಮಾಡಿದರು. ಮುಖ್ಯ ಅತಿಥಿಯಾಗಿ ಶ್ರೀ ಕೆ. ಬಾಲಕೃಷ್ಣ ಗಟ್ಟಿ (ಪ್ರಾಧ್ಯಾಪಕರು ಎಸ್. ವಿ. ಎಸ್. ಕಾಲೇಜು ಬಂಟ್ವಾಳ) ಇವರು ಭಾಗವಹಿಸಿದ್ದರು. ಈ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಕೆ. ಪೈ ಮಣಿಪಾಲ ಇವರು ವಹಿಸಿದ್ದರು. ಸಂಜೆ 4.30ರಿಂದ 5.30ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಳವಡಿಸಲಾಗಿತ್ತು. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಎಡಪದವು ಕುಡುಂಬಿ ಜಾನಪದ ಕಲಾ ವೇದಿಕೆ ಇವರು ಕುಡುಂಬಿ, ಗುಮ್ಮಟ ಕೋಲಾಟ ಮತ್ತು ಜಡೆ ಕೋಲಾಟಗಳ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು. ಈ ಎಲ್ಲಾ ಕಾರ್ಯಕ್ರಮಗಳು ಕೊಂಕಣಿ ಅಕಾಡೆಮಿಯ ಅಧ್ಯಕ್ಷ ಶ್ರೀ ಬಸ್ತಿ ವಾಮನ ಶೆಣೈ, ತುಳು ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಿ. ಎ. ವಿವೇಕ ರೈ, ರಿಜಿಸ್ಟ್ರಾರ್‌ಗಳಾದ ಶ್ರೀ ಪಾಲ್ತಾಡಿ ರಾಮಕೃಷ್ಣ ಮತ್ತು ಶ್ರೀ ಎಂ. ಎಸ್. ಚಂದ್ರಪ್ಪ ಇವರ ನೇತೃತ್ವದಲ್ಲಿ ಜರುಗಿದವು.

ಕನ್ನಡ—ಕೊಂಕಣಿ—ತುಳು ಸಾಹಿತ್ಯ ತ್ರಿವೇಣಿ ಸಂಗಮ

ಕರ್ನಾಟಕ ಕೊಂಕಣಿ, ತುಳು ಸಾಹಿತ್ಯ ಅಕಾಡೆಮಿ ಮತ್ತು ಸಂದೇಶ ಪ್ರತಿಷ್ಠಾನದ ಸಹಯೋಗದಲ್ಲಿ ದಿನಾಂಕ 10–8–97ರಂದು ಮಂಗಳೂರಿನ ಸಂದೇಶ ಪ್ರತಿಷ್ಠಾನದಲ್ಲಿ ಕನ್ನಡ–ಕೊಂಕಣಿ–ತುಳು ಸಾಹಿತ್ಯ ತ್ರಿವೇಣಿ ಸಂಗಮ ಕಾರ್ಯಕ್ರಮವು ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ। ಕೋಟ ಶಿವರಾಮ ಕಾರಂತರಿಂದ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಕರ್ನಾಟಕ ಉಚ್ಚನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಶ್ರೀ ಎಮ್. ಎಫ್. ಸಲ್ಡಾನ್ಹಾ ಅವರು ಪ್ರಧಾನ ಭಾಷಣ ಮಾಡಿದರು. ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಶುಭ ಸಂದರ್ಭದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಹಿತಿ' ಎಂಬ ವಿಷಯದ ಬಗ್ಗೆ ವಿಚಾರಗೋಷ್ಠಿ ನಡೆಯಿತು. ಈ ವಿಚಾರಗೋಷ್ಠಿಯಲ್ಲಿ ಪ್ರೊ। ಸಿ. ಎಸ್. ರಾಮಚಂದ್ರನ್ ಮತ್ತು ಫಾ। ಪ್ರಶಾಂತ್ ಮಾಡ್ತಾ ಅವರು ಭಾಗವಹಿಸಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಅಡೆ ತಡೆಗಳು ಧಾರ್ಮಿಕ ನಿಷ್ಠೆಗಳು ಪೂರ್ವಗ್ರಹಗಳು ರಾಜಕೀಯ ನಿಯಂತ್ರಣಗಳ ಮಾಧ್ಯಮಗಳಲ್ಲಿ ಅತಿರಂಜತೆ ಎಂಬ ವಿಷಯಗಳ ಬಗ್ಗೆ ವಿಚಾರ ಗೋಷ್ಠಿಯನ್ನು ಕ್ರಮವಾಗಿ ಶ್ರೀಮತಿ ಆರ್. ಪೂರ್ಣಿಮಾ, ಡಾ। ಪ್ರಭಾಕರ ಶಿಶಿಲ, ಪ್ರೊ। ಕೆ. ವಿ. ನಾಗರಾಜ್ ಅವರು ನೆರವೇರಿಸಿಕೊಟ್ಟರು. ಈ ಸಭೆಯ ನಿರ್ವಹಣೆಯನ್ನು

ತುಳು ಅಕಾಡೆಮಿಯ ಮಾನ್ಯ ಅಧ್ಯಕ್ಷರಾದ ಪ್ರೊ| ವಿವೇಕ ರೈ ನಡೆಸಿಕೊಟ್ಟರು. ನಂತರ ಕನ್ನಡ ಕೊಂಕಣಿ ತುಳು ಕವಿಗೋಷ್ಠಿ ಏರ್ಪಾಡಿಸಲಾಗಿತ್ತು. ಮೂರು ಭಾಷೆಗಳ ತಲಾ ಐದ್ದೈದು ಕವಿಗಳು ಕನ್ನಡ – ಡಿ. ಬಿ. ರಜಿಯಾ, ಚೇತನ್ ಸೋಮೇಶ್ವರ, ಶ್ರೀ ಕೃಷ್ಣ ಚೆನ್ನಂಗೋಡು, ಪ್ರೊ| ರಾಮದಾಸ್, ಡಾ| ನಾ. ದಾಮೋದರ ಶೆಟ್ಟಿ. ಕೊಂಕಣಿ–ವಿಲ್ಪಿ ರೆಬಿಂಬಸ್, ಸಿರಿಲ್ ಜಿ. ಸಿಕ್ವೇರಾ, ಗ್ಲೇಡಿಸ್ ರೇಗೊ, ಶಕುಂತಲಾ ಕಿಣಿ, ವತ್ಸಲಾ ಬಾಳಿಗಾ. ತುಳು – ವೆಂಕಟರಾಜ ಪುಣಿಂಚಿತ್ತಾಯ, ಕೆ. ಲೀಲಾವತಿ, ಎಸ್. ಪಿ. ಮಂಚಿ, ಅಮೃತ ದೀಕಯ್ಯ, ಗಣೇಶ ಪ್ರಸಾದ್ ಪಾಂಡೇಲ್. ಈ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ಕಯ್ಯಾರ ಕಿಂಞಣ್ಣ ರೈ ವಹಿಸಿದ್ದರು. ಹಾಗೂ ಸಭಾ ನಿರ್ವಹಣೆಯನ್ನು ಶ್ರೀ ಬಸ್ತಿ ವಾಮನ ಶೆಣೈಯವರು ನಡೆಸಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ : ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ| ಎಸ್. ಗೋಪಾಲ ಇವರು ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಕಾರ್ನಾಡ್ ಸದಾಶಿವ ರಾವ್ ಇವರ ಬಗ್ಗೆ ಪ್ರೊ| ಎಮ್. ರಾಮಚಂದ್ರ ಕಾರ್ಕಳ, ಕುದ್ಮುಲ್ ರಂಗ ರಾವ್ ಇವರ ಬಗ್ಗೆ ಶ್ರೀ ಪಿ. ಕಮಲಾಕ್ಷ ಮಂಗಳೂರು, ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಬಗ್ಗೆ ಶ್ರೀ ಸಂತೋಷ ಕುಮಾರ್ ಗುಲ್ವಾಡಿ ಇವರು ವಿಚಾರಗಳನ್ನು ಮಂಡಿಸಿದರು.

ಕೊಂಕಣಿ ಲೋಕವೇದದ ಪರಿಚಯ

ಈ ಕಾರ್ಯಕ್ರಮವು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಭಾರತಿ ಶಿವಮೊಗ್ಗ ಇವರ ಸಹಯೋಗದೊಂದಿಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ದಿನಾಂಕ 3.8.97ರಂದು ಶ್ರೀ ಬಸ್ತಿ ವಾಮನ ಶೆಣೈಯವರಿಂದ ಉದ್ಘಾಟನೆಯೊಂದಿಗೆ ಮತ್ತು ಪ್ರಾಸ್ತಾವಿಕ ಭಾಷಣದೊಂದಿಗೆ ಪ್ರಾರಂಭಿಸಲಾಯಿತು. ಕೊಂಕಣಿ ಲೋಕವೇದದ ಪರಿಚಯ — ಈ ವಿಚಾರಗೋಷ್ಠಿಯಲ್ಲಿ ಕೊಂಕಣಿ ಲೋಕವೇದದಲ್ಲಿ ಶಿಶುಗೀತೆ ಎಂಬ ವಿಷಯದ ಬಗ್ಗೆ ಶ್ರೀ ಅರುಣ್ ಎಸ್. ಉಭಯಕರ್ ಇವರು ಶಿಶು ಸಾಹಿತ್ಯದ ಬಗ್ಗೆ ವಿಚಾರ ಮಂಥನ ಮಂಡಿಸಿದರು. ಕೊಂಕಣಿ "ಲೋಕವೇದಾಂತು ಹುದಗತ್ಯೊ ಆನಿ ಹುಮ್ಮಣ್ಯೊ" ಎಂಬ ವಿಚಾರದ ಬಗ್ಗೆ ಶ್ರೀ ಎಂ. ಮಾಧವ ಪೈ (ನಿವೃತ್ತ ಪ್ರಾಂಶುಪಾಲರು) ಹಾಗೂ 8ನೇ ಪರಿಚ್ಛೇದದಲ್ಲಿ ಕೊಂಕಣಿ – ನಮ್ಮ ಜವಾಬ್ದಾರಿ – ಎಂಬ ವಿಷಯದ ಬಗ್ಗೆ ಡಾ| ಶಿವರಾಮ ಕಾಮತ್ ಇವರುಗಳು ತಮ್ಮ ಪ್ರಬಂಧ ಮಂಡನೆ ಮಾಡಿದರು. ನಂತರ ಕೊಂಕಣಿ ಭಾರತಿ ಅಧ್ಯಕ್ಷ ಜೆ. ಎನ್. ಎನ್. ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಸನ್ಮಾನ್ಯ ಶ್ರೀ ಧರ್ಮಾನಂದ ರಾವ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಬಸ್ತಿ ವಾಮನ ಶೆಣೈಯವರಿಗೆ ವಿಶ್ವ ಸಮ್ಮೇಳನದ ಯಶಸ್ವಿಗೆ ಕಾರಣರಾದ ಪ್ರಯುಕ್ತ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ನಂತರ ಶ್ರೀ ಲಕ್ಷ್ಮೀವೆಂಕಟೇಶ್ವರ ಕೊಂಕಣಿ ನಾಟಕ ಸಭಾ ಕುಂದಾಪುರ ಇವರಿಂದ 'ತೀನ್ ರತ್ನ' ಎಂಬ ಕೊಂಕಣಿ ನಾಟಕವನ್ನು

ಸಾದರಪಡಿಸಲಾಯಿತು. ಅಕಾಡೆಮಿಯ ಪ್ರಭಾರ ರಿಜಿಸ್ಟ್ರಾರ್ ಶ್ರೀ ಎಂ. ಎಸ್. ಚಂದ್ರಪ್ಪ ಅವರು ವಂದನಾರ್ಪಣೆಗೈದರು.

ಕೊಂಕಣಿ ಅಭಿನಯ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಗಳು

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಭಾಷಾ ಮಂಡಳಿ (ರಿ) (ಕರ್ನಾಟಕ) ಮಂಗಳೂರು ಇವರ ಸಹಯೋಗದಲ್ಲಿ ದಿನಾಂಕ 30-8-97ರಂದು ಕಾರ್ಮೆಲ್ ಇಂಗ್ಲಿಷ್ ಸ್ಕೂಲ್, ಮಂಗಳೂರು ಇಲ್ಲಿ ಕಾರ್ಮೆಲ್ ಸಂಘದ ಮುಖ್ಯ ಸಹಾಯಕಿ ಸಿ! ವಿನ್ಸೆಂಜಾ ಇವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಂಕಣಿ ಅಕಾಡೆಮಿಯ ಮತ್ತು ಕೊಂಕಣಿ ಭಾಷಾ ಮಂಡಳಿಯ ಅಧ್ಯಕ್ಷರಾದ ಶ್ರೀ ಬಸ್ತಿ ವಾಮನ ಶೆಣೈಯವರು ವಹಿಸಿದ್ದರು.

ಕೊಂಕಣಿ ಅಭಿನಯ ಸ್ಪರ್ಧೆಯಲ್ಲಿ 13 ಪಂಗಡಗಳು ಭಾಗವಹಿಸಿದ್ದವು. ಶ್ರೀಮತಿ ಜುಲಿಯಾನ ಮಸ್ಕರೆಂಞಸ್, ಶ್ರೀಮತಿ ಮೇರಿ ಪತ್ರಾವೊ ಮತ್ತು ಶ್ರೀ ಎಂ. ವೆಂಕಟೇಶ್ ಪ್ರಭು ಮುಖ್ಯ ತೀರ್ಪುಗಾರರಾಗಿದ್ದರು. ಈ ಅಭಿನಯ ಸ್ಪರ್ಧೆಯಲ್ಲಿ ಮೊದಲನೆ ಸ್ಥಾನ ನಳಂಡ ಇಂಗ್ಲಿಷ್ ಹೈಯರ ಪ್ರೈಮರಿ ಸ್ಕೂಲ್ ಮಂಗಳೂರು (ರೂ. 750); ಎರಡನೇ ಸ್ಥಾನ ಕಾರ್ಮೆಲ್ ಇಂಗ್ಲಿಷ್ ಮಿಡಿಯಂ ಸ್ಕೂಲ್, ಮಂಗಳೂರು (ರೂ. 500-00); ಮೂರನೇ ಬಹುಮಾನ ಕೆನರಾ ಹೈಸ್ಕೂಲ್ ಉರ್ವಾ, ಮಂಗಳೂರು (ರೂ. 300-00); ಪಡೆದುಕೊಂಡರು. ಕೆನರಾ ಹೈಯರ್ ಪ್ರೈಮರಿ ಸ್ಕೂಲ್, ಸಂತ ಜೋಸೆಫ್ ಅಸಾಯ್ಲಮ್ ಹಾ. ಪ್ರೈಮರಿ ಸ್ಕೂಲ್, ಕೆನರಾ ಹೈಸ್ಕೂಲ್ ಮಂಗಳೂರು ಇವರಿಗೆ ರೂ. 150-00ರ ಸಮಾಧಾನಕರ ಬಹುಮಾನ ನೀಡಲಾಯಿತು. ಪಾತ್ರ ವಹಿಸಿದ ಎಲ್ಲಾ ತಂಡಗಳಿಗೆ ರೂ. 250-00ರಂತೆ ವಸ್ತ್ರಾಲಯದ ಖರ್ಚಿನ ಬಾಬ್ತು ನೀಡಲಾಯಿತು. ವಿಜೇತರಿಗೆ ಬಹುಮಾನಗಳನ್ನು ಕೊಂಕಣಿ ಅಕಾಡೆಮಿ ಅಧ್ಯಕ್ಷ ಶ್ರೀ ಬಸ್ತಿ ವಾಮನ ಶೆಣೈಯವರು ವಿತರಿಸಿದರು. ಶ್ರೀ ರಾಘವೇಂದ್ರ ರಾವ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮವು ನಡೆಸಲಾಯಿತು. ಹಾಗೂ ಅಕ್ಟೋಬರ್ 10ರಂದು 'ಸ್ಪರ್ದೆ-97'ರಲ್ಲಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಪ್ರಬಂಧದ ವಿಷಯ 1. ಕೊಂಕಣಿ ಸಂಸ್ಕೃತಿಯ ಮೇಲೆ ಆಧುನಿಕತೆಯ ಪ್ರಭಾವ 2. ಕೊಂಕಣಿ ಸಾಹಿತ್ಯದಲ್ಲಿ ನನಗೆ ಮೆಚ್ಚುಗೆಯಾದ ಮೂರು ಪುಸ್ತಕಗಳು. ಈ ವಿಷಯಗಳ ಬಗ್ಗೆ ಐದು ಪ್ರಬಂಧ ಮಂಡನೆ ದಾಖಲೆಯಾಗಿದ್ದುವು. ಡಾ! ಎಡ್ವರ್ಡ್ ನಜ್ರೆತ್, ಜೇಸ್ ಡಿ'ಸೋಜಾ, ಎಡ್ವಿನ್ ಜೆ. ಎಫ್. ಡಿ'ಸೋಜಾ ಇವರ ತೀರ್ಪುಗಳೊಂದಿಗೆ ಪ್ರಥಮ ಬಹುಮಾನ ಕು! ಜಯನಾ ಪಿಂಟೊ ರೂ. 750-00, ದ್ವಿತೀಯ ಬಹುಮಾನ ಕು! ಲಯ್ಲಾ ಲೋಬೊ ರೂ. 500-00, ಮೂರನೇ ಬಹುಮಾನ ಕು! ನಮ್ರತಾ ಪತ್ರಾವೊ ರೂ. 300-00ಗಳನ್ನು ಪ್ರಶಸ್ತಿ ಪತ್ರದೊಂದಿಗೆ ಪಡೆದರು. ಈ ಬಹುಮಾನದ ಹಣವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಕೊಂಕಣಿ ಭಾಷಾ ಮಂಡಳಿಗೆ ಅನುದಾನವಾಗಿ ನೀಡಿ ಮಕ್ಕಳಲ್ಲಿ ಕೊಂಕಣಿ ಭಾಷೆಯ ಬಗ್ಗೆ ಪ್ರೋತ್ಸಾಹ ನೀಡಲು ಸಹಕರಿಸಿತು.

ಕೊಂಕಣಿಯಲ್ಲಿ ಮಕ್ಕಳ ಸಾಹಿತ್ಯ ಗೋಷ್ಠಿ

ಈ ಕಾರ್ಯಕ್ರಮವು ದಿನಾಂಕ 31-8-97ರಂದು ಮೂಡುಬಿದರೆ ಕೊರ್ಪುಸ್ ಕ್ರಿಸ್ತಿ ಚರ್ಚ್‌ನ ಸಭಾಂಗಣದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಲೇಖಕರ ಒಕ್ಕೂಟ ಇವರ ಸಹಯೋಗದೊಂದಿಗೆ ಮೂಡಬಿದರೆಯ ಪುರಸಭೆಯ ಅಧ್ಯಕ್ಷ ಶ್ರೀ ಪ್ರೇಮಾನಂದ ಪ್ರಭು ಇವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸ್ತಿ ವಾಮನ ಶೆಣೈಯವರು ವಹಿಸಿದ್ದರು. ಹಾಗೂ ಮುಖ್ಯ ಅತಿಥಿಯಾಗಿ ಡಾ| ಮೋಹನ ಆಳ್ವಾ ಭಾಗವಹಿಸಿದ್ದರು. ಪ್ರೊ| ಎಲ್. ವಿ. ಅಂದ್ರಾಡೆ, ಶ್ರೀ ಆ್ಯಂಡ್ರ್ಯೂ ಸೆರಾವೊ, 'ರಾಕ್ಣೊ' ಸಂಪಾದಕ ಫಾ| ಸ್ಯಾಮುವೆಲ್ ಸಿಕ್ವೇರಾ ಮುಖ್ಯ ಅತಿಥಿಗಳಾಗಿದ್ದು, ಈ ಸಾಹಿತ್ಯಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ| ಜಯಪ್ರಕಾಶ್ ಮಾವಿನಕುಳಿ, ಶ್ರೀ ಲಿಯೊ ಡಿಸೋಜಾ, ಶ್ರೀ ವಲ್ಲಿ ವಗ್ಗ ಮೈಸೂರು, ರೆ| ಫಾ| ಸ್ಯಾಮುವೆಲ್ ಸಿಕ್ವೇರಾ, ಶ್ರೀ ಎಚ್. ರಾಘವೇಂದ್ರ ರಾವ್, ರೆ| ಫಾ| ಮಾರ್ಕ್ ವಾಲ್ಡರ್. ಡಾ| ಎಡ್ವರ್ಡ್ ನಜ್ರೆತ್ ಮತ್ತು ಶ್ರೀ ಆ್ಯನ್ಸಿ ಪಾಲಡ್ಕಾ, ಶ್ರೀ ಡೊಲ್ಫಿ ಲೋಬೊ ಇವರುಗಳು ಮಕ್ಕಳ ಸಾಹಿತ್ಯದ ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ 146 ಸಾಹಿತಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ 'ಫಾಲ್ಯಾಂತ್ಲಿಂ ಸಾಳ್ಕಾಂ' ಪಂಗಡದಿಂದ ಬಾಲ ಕವಿತೆಗಳ ಅಭಿನಯನ ಮತ್ತು ಆಮಂತ್ರಿತ ಕವಿಗಳಿಂದ ಬಾಲ ಕವಿತೆಗಳ ಕವಿಗೋಷ್ಠಿ ಕಾರ್ಯಕ್ರಮಗಳು ನಡೆದವು. ಹಾಗೂ ಶ್ರೀ ಶಾಂತ್ ಪ್ರಕಾಶ್ ಸಿಕ್ವೇರಾ ನಿರ್ದೇಶಿಸಿದ 'ಪಿಶೆಂ ಸುಟ್ಲೆಂ' ಕೊಂಕ್ಣಿ ನಾಟಕವನ್ನು ಪ್ರದರ್ಶಿಸಲಾಯಿತು.

ಕೊಂಕಣಿ ಸಮ್ಮಿಲನ – '97

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಭಾಷಾ ಮಂಡಳಿ ಕರ್ನಾಟಕ (ರಿ) ಇವರ ಜಂಟಿ ಆಶ್ರಯದಲ್ಲಿ ಬಲ್ಮಠದ ಸಹೋದಯ ಸಭಾಂಗಣದಲ್ಲಿ ದಿನಾಂಕ 21-12-97ರಂದು ಬೆಳಿಗ್ಗೆ 9.30ಕ್ಕೆ ಮೊ| ಎ. ಎಫ್. ಡಿ'ಸೋಜಾ ಇವರ ಉದ್ಘಾಟನೆಯೊಂದಿಗೆ ಜರುಗಿತು. ಮುಖ್ಯ ಅತಿಥಿಯಾಗಿ ಶ್ರೀ ಕೆ. ಕೆ. ಪೈ ಭಾಗವಹಿಸಿದ್ದರು. ಕರ್ನಾಟಕ ರಾಜ್ಯದ ಕೊಂಕಣಿಗರು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ (ಕೊಂಕಣಿ ವಾವ್ರಾಡ್ಯಾಂಚಿ ದಿರ್‌ಸೂಚಿ) ಡೈರೆಕ್ಟರಿ ತಯಾರಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಸಾಹಿತ್ಯ, ಲಲಿತಕಲೆ, ನಾಟಕ, ಸಂಸ್ಕೃತಿ, ವ್ಯಾಪಾರ ಮತ್ತು ಪತ್ರಿಕೋದ್ಯಮ – ಈ ಕ್ಷೇತ್ರದಲ್ಲಿ ಕೆಲವು ಪರಿಣತರು ದಿಕ್ಸೂಚಿ ಹೇಗೆ ಇರಬೇಕು ಎಂಬ ವಿಷಯದ ಬಗ್ಗೆ ಚರ್ಚೆ ನಡೆಸಿದರು. ದಿಕ್ಸೂಚಿ ತಯಾರಿಸುವ ಯೋಜನೆಯನ್ನು ಅಕಾಡೆಮಿಯು ಮಾಡಲು ಯೋಚಿಸಿತು.


ಕೊಂಕಣಿ ಲೋಕವೇದ ವಿಚಾರಗೋಷ್ಠಿ

ಈ ಕಾರ್ಯಕ್ರಮವು ದಿನಾಂಕ 11-2-98ರಂದು ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಭಾರತಿ

ಶಿವಮೊಗ್ಗ ಇವರ ಜಂಟಿ ಆಶ್ರಯದಲ್ಲಿ ಶ್ರೀ ಬಸ್ತಿ ವಾಮನ ಶೆಣೈಯವರ ಉದ್ಘಾಟನೆಯೊಂದಿಗೆ ಜರುಗಿತು. ಮುಖ್ಯ ಅತಿಥಿ ಪ್ರೊ। ದರ್ಮಾನಂದ ರಾವ್ ಹಾಜರಿದ್ದರು. ಹಾಗೂ ರೆ। ಫಾ। ಮಾರ್ಕ್ ಪ್ಯಾಟ್ರಿಕ್ ಡಿ'ಸಿಲ್ವಾ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಈ ವಿಚಾರಗೋಷ್ಠಿಯಲ್ಲಿ ಕೊಂಕಣಿ ಲೋಕವೇದದಲ್ಲಿ ಹಿರಿಯರ ಕಥೆಗಳು ಎಂಬ ವಿಷಯದ ಬಗ್ಗೆ ಶ್ರೀಮತಿ ಚಂದ್ರಮತಿ ಎಸ್. ರಾವ್ ಮಂಗಳೂರು, ಕೊಂಕಣಿ ಲೋಕವೇದದಲ್ಲಿ ಮಕ್ಕಳ ಕಥೆಗಳು ಎಂಬ ವಿಷಯದಲ್ಲಿ ಶ್ರೀಮತಿ ಅನಿತಾ ಪಿಂಟೊ ಮಣಿಪಾಲ ಹಾಗೂ ಕೊಂಕಣಿ ಲೋಕವೇದದಲ್ಲಿ ಹೂಮಿಣ್ಯೊ ಈ ವಿಷಯದ ಬಗ್ಗೆ ಶ್ರೀ ರೋಹಿದಾಸ್ ಎನ್. ಶೇಟ್ ಇವರುಗಳು ವಿಚಾರ ಮಂಥನ ನಡೆಸಿದರು.

ಸಂಜೆ 6ರಿಂದ 8.30ರ ವರೆಗೆ 'ಗೃಹಣಿ ಗೃಹಮುಚ್ಯತೆ' ಎಂಬ ನಾಟಕವನ್ನು ತ್ರಿವೇಣಿ ಕಲಾ ಸಂಗಮ ಮುಂಬಯಿ ಇವರು ಸಾದರ ಪಡಿಸಿದರು.

ಕರ್ನಾಟಕ — ಗೋವಾ ಕೊಂಕಣಿ ಸಾಹಿತ್ಯ ಕಾರ್ಯಾಗಾರ



ಈ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು 1998 ಮಾರ್ಚ್ ತಿಂಗಳ 27ನೇ ತಾರೀಕಿನಂದು ಬಲ್ಮಠದ 'ಸಹೋದಯ' ಸಭಾಭವನದಲ್ಲಿ ಏರ್ಪಡಿಸಿತ್ತು. ಈ ಕಾರ್ಯಕ್ರಮವನ್ನು ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಬಿ. ವಿ. ಬಾಳಿಗಾರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಅಕಾಡೆಮಿಯ ಅಧ್ಯಕ್ಷ ಬಸ್ತಿ ವಾಮನ ಶೆಣೈಯುವರು ಕೊಂಕಣಿ ಭಾಷೆಯ ಸಾಹಿತ್ಯ ಕುರಿತಾದ ವಿವಿಧ ಪ್ರಕಾರಗಳ ಬಗ್ಗೆ ತಿಳಿಸಿದರು.

ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಕೊಂಕಣಿ ಭಾಷೆಯಲ್ಲಿ ಸಾಹಿತ್ಯ ಅಧಿಕೃತವಾಗಿ ಕನ್ನಡ, ದೇವನಾಗರಿ ಮತ್ತು ರೋಮಿ ಲಿಪಿಗಳನ್ನು ಅಳವಡಿಸಿಕೊಂಡಿದೆ. ಪರಿಣಾಮವಾಗಿ ಈ ಮೂರು ಪ್ರಕಾರದ ಸಾಹಿತ್ಯದಲ್ಲಿ ಪರಸ್ಪರ ಪರಿಚಯ ಸಾಕಷ್ಟಿಲ್ಲ. ಈ ಕೊರತೆಯನ್ನು ಆದಷ್ಟು ಮಟ್ಟಿಗೆ ಪರಿಹರಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೇಲಿನ ಮೂರು ಲಿಪಿಗಳಲ್ಲಿ ಈವರೆಗೆ ನಡೆದ ಪ್ರಗತಿಯನ್ನು ಅರಿತು ಸಮನ್ವಯ ರೂಪದಲ್ಲಿ ಒಂದು ಸೇತುವೆಯನ್ನು ಹಾಕುವುದು. ಗೋವಾದಿಂದ ಆಗಮಿಸಿದ 14 ಮಂದಿ ಪ್ರಖ್ಯಾತ ಸಾಹಿತಿಗಳಲ್ಲಿ ಮೂವರು ತಮ್ಮ ಪ್ರಬಂಧ ಮಂಡಿಸಿದರು. 1. ನಾಗರಿ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ಎಂಬ ವಿಷಯದ ಬಗ್ಗೆ ಶ್ರೀ ಪ್ರಕಾಶ್ ಥಳಿ 2. ರೋಮಿ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ಎಂಬ ವಿಷಯದ ಬಗ್ಗೆ ಶ್ರೀ ದಾಮೋದರ ಮಾವ್ಜೊ 3. ಗೋವಾ ಕೊಂಕಣಿ ಭಾಷೆ ಮತ್ತು ಸಾಹಿತ್ಯ — ಶ್ರೀ ಚಂದ್ರಕಾಂತ ಕೇಣಿ. ಅದಕ್ಕೆ ಅನುಕೂಲವಾಗಿ ಕರ್ನಾಟಕದ 6 ಪ್ರಖ್ಯಾತ ಸಾಹಿತಿಗಳು ತಮ್ಮ ಪ್ರಬಂಧಗಳನ್ನು ಕ್ರಮವಾಗಿ ಮಂಡಿಸಿದರು.

1.	ಕನ್ನಡ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ	: ಶ್ರೀ ಎಡ್ವಿನ್ ಜೆ. ಎಫ್. ಡಿ ಸೋಜಾ
2.	ಕೊಂಕಣಿ ಸಾಹಿತ್ಯಕ್ಕೆ ಹಿಂದೂ ಸಮಾಜದ ದೇಣಿಗೆ	: ಶ್ರೀ ಮಾಧವ ಪೈ, ಶಿವಮೊಗ್ಗ
3.	ಕೊಂಕಣಿ ಕವಿತಾ ಪ್ರಪಂಚ	: ಶ್ರೀ ಮೌರಿಸ್ ಡೇಸಾ
4.	ಕೊಂಕಣಿ ಪ್ರಕಾಶನಗಳು	: ಶ್ರೀ ಡೊಲ್ಫಿ ಎಫ್. ಲೋಬೊ
5.	ಕೊಂಕಣಿ ಭಕ್ತಿ ಸಾಹಿತ್ಯ	: ಫಾ। ಚೇತನ್ ಲಿಯೊ ಲೋಬೊ
6.	ಕೊಂಕಣಿಯಲ್ಲಿ ಹಾಸ್ಯ ಸಾಹಿತ್ಯ	: ಶ್ರೀ ಸಿರಿಲ್ ಜಿ. ಸಿಕ್ವೇರಾ

ಈ ಪ್ರಬಂಧ ಮಂಡನೆಯ ನಂತರ ಶ್ರೀ ಜೆನೆಟ್ ಪಿಂಟೊ, ಪ್ರೊ। ಕಾಶಿನಾಥ ಮಹಾಲೆ ಮತ್ತು ಶ್ರೀ ಸಂತೋಷ್ ಕುಮಾರ್ ಗುಲ್ವಾಡಿ ಇವರ ಸಮನ್ವಯದಲ್ಲಿ ಮಹತ್ವದ ಚರ್ಚೆಗಳು ನಡೆದವು. ಕಾರ್ಯಾಗಾರದಲ್ಲಿ ಭಾಗವಹಿಸಿದ ಹಲವಾರು ಪ್ರಖ್ಯಾತ ಸಾಹಿತಿಗಳು ಚರ್ಚೆಯಲ್ಲಿ ವಿಚಾರಗಳನ್ನು ವಿವರವಾಗಿ ಮಂಡಿಸಿ ಉತ್ಸುಕತೆಯಿಂದ ಭಾಗವಹಿಸಿದರು.

ನಂತರ ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಮುಂದೇನು ಎಂಬ ವಿಷಯದಲ್ಲಿ ಪ್ರತಿನಿಧಿಗಳಿಂದ ಉಪಯುಕ್ತ ಸಲಹೆಗಳು ಬಂದವು. ಕರ್ನಾಟಕ–ಗೋವಾ ರಾಜ್ಯದಲ್ಲಿ ಕೊಂಕಣಿ ಭಾಷೆ, ಸಾಹಿತ್ಯ, ಕಲೆ, ಸಾಂಸ್ಕೃತಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯ, ದೇವನಾಗರಿ, ಕನ್ನಡ ಲಿಪಿಗಳಲ್ಲಿನ ಸಾಹಿತ್ಯವನ್ನು ಲಿಪ್ಯಾಂತರಗೊಳಿಸಿ ಪ್ರಚಾರಗೊಳಿಸುವ ಬಗ್ಗೆಯೂ ನಿರ್ಧರಿಸಲಾಯಿತು. ಈ ಕುರಿತಾದ ವಿಚಾರ ವಿನಿಮಯ ಪ್ರಕ್ರಿಯೆಯನ್ನು ಮುಂದುವರಿಸಲು ಕರ್ನಾಟಕ–ಗೋವಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲೆಗಳ ಕಲಾಕ್ಷೇತ್ರಗಳ ಪ್ರಮುಖರುಗಳ ಒಂದು ಸಮಿತಿಯನ್ನು ನೇಮಿಸಲಾಯಿತು.

ಕೊಂಕಣಿ ಭಾಷಾಂತರ ಕಾರ್ಯಾಗಾರ



ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಮೈಸೂರಿನಲ್ಲಿ 1997 ಡಿಸೆಂಬರ್ 27–28ರಂದು ಎರಡು ದಿನದ ಭಾಷಾಂತರ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಭಾಷಾಂತರ ಕಾರ್ಯಾಗಾರನ್ನು ಹೋಟೆಲ್ ಗೋವರ್ಧನ ಸಭಾಭವನದಲ್ಲಿ ಡಾ। ಎಡ್ವರ್ಡ್ ನೊರೊನ್ಹಾರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಕರ್ನಾಟಕದ ನಾಲ್ಕೂ ಮೂಲೆಗಳಿಂದ ಬಂದಿರುವ 22 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕೊಂಕಣಿ ಸಾಹಿತ್ಯದ ಅಭಿವೃದ್ಧಿಯ ಹಾದಿಯನ್ನು ಕನ್ನಡ ಸಾಹಿತ್ಯದ ಬೆಳವಣಿಗೆಯ ಹಾದಿಯಲ್ಲೇ ಸಾಗಬೇಕಾಗಿರುವ ಅಗತ್ಯದ ಬಗ್ಗೆ ಡಾ। ಎಡ್ವರ್ಡ್ ನೊರೊನ್ಹಾರವರು ತಿಳಿಸಿದರು. ಬನ್ನಿ ಮಂಟಪದ ಕ್ಯಾಥೊಲಿಕ್ ಸೆಂಟರ್‌ನಲ್ಲಿ ನಡೆದ ಕಾರ್ಯಾಗಾರದಲ್ಲಿ ಕನ್ನಡ ಕತೆಗಳನ್ನು ಕೊಂಕಣಿಯಲ್ಲಿ ಭಾಷಾಂತರಿಸುವ ವಿಧಾನಗಳ ಬಗ್ಗೆ ಚರ್ಚಿಸಲಾಯಿತು. ಡಾ। ಎಡ್ವರ್ಡ್ ನೊರೊನ್ಹಾರವರ ನಿರ್ದೇಶನದಲ್ಲಿ ಪ್ರೊ। ಆರ್. ಎಸ್. ಸುಂದರಂ ಮತ್ತು ಎಚ್. ಎಸ್. ಹರಿಶಂಕರ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

'ಭಾಷಾಂತರ, ಪ್ರವೇಶ, ಮುಖ್ಯ ವಿಷಯ ಮತ್ತು ವಿಧಾನ' – ಈ ಬಗ್ಗೆ ಡಾ। ಎಡ್ವರ್ಡ್ ನೊರೊನ್ಹಾ ಇವರಿಂದ ಉಪನ್ಯಾಸ ಮತ್ತು ಚರ್ಚೆ, ದಕ್ಷಿಣ ಭಾರತೀಯ ಭಾಷೆಗಳಲ್ಲಿ ಭಾಷಾಂತರ ಇದರ ಬಗ್ಗೆ ಆರ್. ವಿ. ಎಸ್. ಸುಂದರಂ, "ಸಾಂಸ್ಕೃತಿಕ್" ಭಾಷಾಂತರ್ ವಾವ್ರ್ ಆನಿ ವ್ಯವಸ್ಥಾ – ಏಕ್ ಉದಾಹರಣ್' ಈ ಬಗ್ಗೆ ಶ್ರೀ ಎಚ್. ಎಸ್.

ಹರಿಶಂಕರ್, ಭಾಷಾಂತರ ಕೆಲಸದಲ್ಲಿ ನನ್ನ ಅನುಭವ ಈ ಬಗ್ಗೆ ಶ್ರೀ ಸಿರಿಲ್ ಜೆ. ವೇಗಸ್, ಸಮಾರೋಪ ಸಮಾರಂಭದಲ್ಲಿ ಈ ವಿಷಯಗಳ ಕಾರ್ಯನಿರ್ವಹಣೆಯನ್ನು ಪ್ರತಿಕ್ರಿಯೆಗಳನ್ನು ಸಾದರಪಡಿಸಿದರು. ನಂತರ ಪ್ರಬಂಧಗಳನ್ನು ಮಂಡಿಸಿದ ಬಳಿಕ ವಿಚಾರಗಳ ಬಗ್ಗೆ ಚರ್ಚೆಗಳು ನಡೆದವು.

ಕೊಂಕಣಿ ಸಾಹಿತ್ಯ ಸಮ್ಮೇಳನ



ದಿನಾಂಕ 10-8-97ರಂದು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಸಾಹಿತ್ಯ ಸಮ್ಮೇಳನ ಸಮಿತಿ ಕುಂದಾಪುರ ಇವರ ಜಂಟಿ ಆಶ್ರಯದಲ್ಲಿ ಶ್ರೀ ಕೆ. ಕೆ. ಪೈ, ಮಣಿಪಾಲ, ಇವರ ಅಧ್ಯಕ್ಷತೆಯಲ್ಲಿ ಕೊಂಕಣಿ ಸಾಹಿತ್ಯ ಸಮ್ಮೇಳನವು ಜರುಗಿತು. ಈ ಕಾರ್ಯಕ್ರಮವನ್ನು ಕೊಂಕಣಿ ಅಕಾಡೆಮಿ ಅಧ್ಯಕ್ಷ ಶ್ರೀ ಬಸ್ತಿ ವಾಮನ ಶೆಣೈರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ವಿ. ಎಸ್. ಸೋಂದೆ, ಶ್ರೀ ಯೋಗೀಶ್ ಭಟ್ ಮತ್ತು ಕೆ. ಎಸ್. ರಾಯ್ಕರ್ ವಹಿಸಿದರು.

ಮೊದಲನೇ ಗೋಷ್ಠಿ : ಕೊಂಕಣಿ ಸಾಹಿತ್ಯ ಅಭಿವೃದ್ಧಿ ಕಶ್ಶಿ? ಎಂಬ ವಿಷಯದ ಬಗ್ಗೆ ಶ್ರೀಮತಿ ಜ್ಯೋತ್ಸ್ನಾ ಕಾಮತ್, ಬೆಂಗಳೂರು; ಶ್ರೀ ಎಡ್ವಿನ್ ಜೆ. ಎಫ್. ಡಿ'ಸೋಜಾ ಮಂಗಳೂರು; ಶ್ರೀ ಆನಂದ ಶಾನುಭಾಗ್, ಶಿರಸಿ; ಶ್ರೀಮತಿ ವಿನ್ನಿಫ್ರೆಡ್ ಫೆರ್ನಾಂಡಿಸ್ ಕುಂದಾಪುರ ಇವರುಗಳು ಭಾಗವಹಿಸಿ ಸಾಹಿತ್ಯ ಅಭಿವೃದ್ಧಿಯ ಬಗ್ಗೆ ವಿಚಾರ ಮಂಡನೆ ಮಾಡಿದರು. ನಂತರ ಭಾಷಣ ಸ್ಪರ್ಧೆಗಳು ಜರುಗಿದವು.

ಎರಡನೇ ಗೋಷ್ಠಿ : ಕೊಂಕಣಿ ಬಾಲ ಸಾಹಿತ್ಯ. ಈ ಕಾರ್ಯಕ್ರಮದಲ್ಲಿ ಶ್ರೀ ಮನೋಹರ ರಾವ್ ಸರ್‌ದೇಸಾಯಿ, ಗೋವಾ; ಶ್ರೀಮತಿ ಚಂದ್ರಮತಿ ಎಸ್. ರಾವ್, ಮಂಗಳೂರು; ಶ್ರೀ ರಾಘವೇಂದ್ರ ರಾವ್ ಮಂಗಳೂರು; ಹಾಗೂ ಶ್ರೀ ಕೆ. ರಾಧಾಕೃಷ್ಣ ಶೆಣೈ – ಕುಂದಾಪುರ ಈ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಮೂರನೇ ಗೋಷ್ಠಿ : ಕೊಂಕಣಿ ಜಾನಪದ ಮತ್ತು ಸಾಹಿತ್ಯದ ಇತಿಹಾಸ ಎಂಬ ವಿಷಯದ ಬಗ್ಗೆ ಶ್ರೀ ಅರುಣ್ ಉಭಯಕರ್ ಕುಮ್ಟಾ; ಶ್ರೀ ಲಕ್ಷ್ಮೀ ಕಾಮತ್, ಕುಂದಾಪುರ; ಪ್ರೊ। ರಾಮು ಕಿಣಿ, ಶಿರಸಿ; ಮತ್ತು ಶ್ರೀ ಜಿ. ಎಲ್. ಡಿ'ಲೀಮಾ ಕುಂದಾಪುರ ಇವರುಗಳು ಕ್ರಮವಾಗಿ ತಮ್ಮ ಪ್ರಬಂಧ ಮಂಡನೆ ಮಾಡಿದರು.

ನಾಲ್ಕನೇ ಗೋಷ್ಠಿ : ಕೊಂಕಣಿ ಬೈಠಕ್

ಈ ಕಾರ್ಯಕ್ರಮದಲ್ಲಿ ಡಾ। ಎಚ್. ಶಾಂತರಾಮ್, ಎರಿಕ್ ಒಜಾರಿಯೋ ಮುಖ್ಯ ಅತಿಥಿಗಳಾಗಿದ್ದರು. ತಜ್ಞರಿಂದ ವಿಚಾರ ಮಂಡನೆಯಾದ ಬಳಿಕ ಈ ಬೈಠಕ್ ಕಾರ್ಯಕ್ರಮದಲ್ಲಿ ಕ್ರಮವಾಗಿ ಫಾ। ಸ್ಯಾಮುವೆಲ್ ಸಿಕ್ವೇರಾ, ಶ್ರೀ ಮಾರುತಿ ದೇವನಹಳ್ಳಿ, ಶ್ರೀ ವಾಸುದೇವ ಶ್ಯಾನುಭಾಗ, ಶ್ರೀ ಎಸ್. ಬಿ. ಕಾಮತ್, ಶ್ರೀ ಆ್ಯನ್ಸಿ ಪಾಲಡ್ಕ, ಶ್ರೀ ಮಾಧವ ಭೋರ್ಕರ್, ಶ್ರೀ ಕೆ. ಬಾಲಕೃಷ್ಣ ಪೈ, ಶ್ರೀಮತಿ ಶಾರದಾ ಭಟ್, ಶ್ರೀಮತಿ ಲಿಡ್ವಿನ್ ಪಿಂಟೊ, ಶ್ರೀ ಕೆ. ಜಿ. ಶ್ಯಾನುಭಾಗ್, ಶ್ರೀಮತಿ ಅಚಲ ಬೆಳಗಿ, ಶ್ರೀ ಮಿಂಗೆಲ್ ಅಂತೋನಿ ಸಿದ್ಧಿ, ಶ್ರೀ ವಾಸುದೇವ ಖಾರ್ವಿ, ಶ್ರೀ ಜುಬೇರ್ ಮುಸಬಾ, ಶ್ರೀ ಸಿದ್ದಾಪುರ ವಾಸುದೇವ ಭಟ್, ಶ್ರೀ ಪಡುಬಿದ್ರಿ ಜಯವಂತ್ ಪೈ, ಶ್ರೀ ಕೋಡಿ ರಮಾನಂದ ಕಾಮತ್, ಶ್ರೀಮತಿ ಉಮಾ ಎಸ್. ಶ್ಯಾನುಭಾಗ್ ಈ ಎಲ್ಲಾ ಸಾಹಿತಿಗಳು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶ್ರೀ ಕೆ. ಕೆ. ಪೈ ಅವರು ಸಮಾರೋಪ ಭಾಷಣಗೈದರು. ಮುಖ್ಯ ಅತಿಥಿಯಾಗಿ ಫಾ। ಸ್ಟೇನಿ ಬಿ. ಲೋಬೊ, ಕುಂದಾಪುರದ ಶ್ರೀ ಗೋವಿಂದರಾಯ ಕಾಮತ್ ಮತ್ತು ಶ್ರೀ ಎಂ. ಎಸ್. ಚಂದ್ರಪ್ಪ, (ಪ್ರಭಾರ ರಿಜಿಸ್ಟಾರ್ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ), ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ. ಎನ್. ರಾವ್ ದಾಂಡೇಲಿಯವರು ವಹಿಸಿದ್ದರು.

ಕೊಂಕಣಿ ಕಲಾ ಸಾಹಿತ್ಯ ಉತ್ಸವ – '98

ಈ ಕಾರ್ಯಕ್ರಮದಲ್ಲಿ ಕ್ರಮವಾಗಿ ಹಸ್ತಕಲಾ, ಲೋಕಕಲಾ, ವಿಚಾರ ಸಂಕೀರ್ಣ ಕವಿಗೋಷ್ಠಿ ಇವುಗಳಿದ್ದವು. ಈ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಅಖಿಲ ಕರ್ನಾಟಕ ಕೊಂಕಣಿ ಪರಿಷತ್ ಬೆಂಗಳೂರು ಮತ್ತು ಕೊಂಕಣಿ ಸಂಸ್ಕೃತಿ ಮಂಡಳ ಸದಾಶಿವಗಡ ಇವರ ಆಶ್ರಯದಲ್ಲಿ ದಿನಾಂಕ 11–1–98ರಂದು ಸದಾಶಿವಗಡದ ಬಾಪೂಜಿ ಕಾಲೇಜು, ಸಭಾಂಗಣದಲ್ಲಿ ಶ್ರೀ ಬಸ್ತಿ ವಾಮನ ಶೆಣೈಯವರು ಕಾರ್ಯಕ್ರಮವನ್ನು



ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಸನ್ಮಾನ್ಯ ಶ್ರೀ ಪಿ. ಎಸ್. ರಾಣೆ, (ಮಾಜಿ ಮಂತ್ರಿಗಳು) ಹಾಗೂ ಶ್ರೀ ಉದಯ ಬೇಂಬ್ರೆ ಅಧ್ಯಕ್ಷರು, ಗೋವಾ ಕೊಂಕಣಿ ಅಕಾಡೆಮಿ, ಸದಾಶಿವಗಡ ಚರ್ಚಿನ ಗುರುಗಳಾದ ಫಾ। ಫೆಲಿಕ್ಸ್ ಲೋಬೊರವರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಹಸ್ತಕಲಾ ಪ್ರದರ್ಶನದೊಂದಿಗೆ ಕಾರ್ಯಕ್ರಮಗಳು ಪ್ರಾರಂಭವಾದವು.

ವಿಚಾರ ಸಂಕೀರ್ಣ : ಕೊಂಕಣಿ ಸಾಹಿತ್ಯದ ಬಗ್ಗೆ ಡಾ। ವಿಲಿಯಂ ಮಾಡ್ತಾ ಧಾರವಾಡ, ಬಾಲ ಸಾಹಿತ್ಯದ ಬಗ್ಗೆ ಡಾ। ಶಿವರಾಮ ಕಾಮತ್ ಕುಮಟಾ, ಲೋಕವೇದದ ಬಗ್ಗೆ ಶ್ರೀ ಎಂ. ಮಾಧವ ಪೈ, ಶಿವಮೊಗ್ಗ, ಕೊಂಕಣಿ ಸಂಸ್ಕೃತಿ ಬಗ್ಗೆ ಶ್ರೀ ಕಮಲಾಕರ ಮಾಳಸೆ ಗೋವಾ, ಪ್ರಸಾರ ಮಾಧ್ಯಮದಲ್ಲಿ ಕೊಂಕಣಿ ಈ ವಿಷಯದ ಬಗ್ಗೆ ಶ್ರೀಮತಿ ಉಷಾ ಕಿಣಿ, ಬೆಂಗಳೂರು ಪ್ರಬಂಧ ಮಂಡನೆ ಮಾಡಿದರು. ಇದರ ಅಧ್ಯಕ್ಷತೆಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಶ್ರೀ ಮಹಾಬಲೇಶ್ವರ ಸೈಲ್ ವಹಿಸಿದರು.

ಕವಿಗೋಷ್ಠಿ : ಕವಿಗೋಷ್ಠಿಯ ಅಧ್ಯಕ್ಷರಾಗಿ ಶ್ರೀ ಚೇತನ್ ಕುಮಾರ್ ನಾಯಕ್, ಮುಖ್ಯ ಅತಿಥಿಯಾಗಿ ಶ್ರೀಮತಿ ಜಯಶ್ರೀ ನಾಯಕ್, ಶ್ರೀ ಅರುಣ ಉಭಯಕರ್ ಕುಮಟ ಭಾಗವಹಿಸಿದ್ದರು. ಕವಿಗೋಷ್ಠಿಯಲ್ಲಿ ಅನೇಕ ಕವಿಗಳು ಭಾಗವಹಿಸಿ ತಮ್ಮ ಸ್ವರಚಿತ ಕವನಗಳನ್ನು ವಾಚಿಸಿದರು.

ಕೊಂಕಣಿ ಲೋಕ ಕಲಾ ಉತ್ಸವ : ಇವರಲ್ಲಿ ವಿವಿಧ ಲೋಕವೇದ ಪ್ರದರ್ಶನದಲ್ಲಿ ಷಹನಾಯಿ, ತಬಲಾ ಸೋಲೋ, ಫುಗುಡಿ ಜಾನಪದಗಳ ಹಾಡು, ಗೋಪ್ಯ ನೃತ್ಯ ಏಕಪಾತ್ರಾಭಿನಯ, ಮಾಂಡೋ, ಧಾಲೋ ಮಾಂಡ ದಿಪಾಮಾಳಾ, ಬಯಲಾಟದ ವಿದೂಷಕ

ಗುಮಟಾ ಫಾಂಗ್ ಸಂಗೀತ ನೃತ್ಯ ರೂಪಕ ಕೊಂಕಣಿ ಕೀರ್ತನ, ಕೊಂಕಣಿ ನಾಟಕ, ಇವುಗಳ ಪ್ರದರ್ಶನ ಏರ್ಪಡಿಸಲಾಗಿತ್ತು.



ಕೊಂಕಣಿ ಜಾನಪದ ಸಾಹಿತ್ಯ ಗೋಷ್ಠಿ : ಈ ಕಾರ್ಯಕ್ರಮವು 26–4–98ರಂದು ಹಿರ್ಗಾನ್ ಸಂತ ಮರಿಯಾ ಗೊರೆಟ್ಟಿ ಸಭಾಭವನದಲ್ಲಿ ಹಿರ್ಗಾನ್ ಚರ್ಚ್‌ನ ಫಾ। ಸಿಪ್ರಿಯನ್ ಪಿಂಟೋ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಂಕಣಿ ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಸ್ತಿ ವಾಮನ ಶೆಣೈ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ವಲ್ಲಿ ವಗ್ಗ, ಶ್ರೀ ಎಂ. ರಾಮಚಂದ್ರ ಕಾರ್ಕಳ ಇವರುಗಳು ಭಾಗವಹಿಸಿದ್ದರು.

ಕೊಂಕಣಿ ಜಾನಪದ ಸಾಹಿತ್ಯದ ಪರಿಚಯ ಪ್ರಭಾವ ಮತ್ತು ಗುಮ್ಟಾಂ ಗೀತೆಗಳು: ಈ ಗೋಷ್ಠಿಯ ಅಧ್ಯಕ್ಷರು ಶ್ರೀ ಎರಿಕ್ ಒಜಾರಿಯೋ, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಆ್ಯಗ್ನೆಸ್ ಡಿಸೋಜಾ ಮತ್ತು ಜೋಕಿಂ ಪಿರೇರಾ, ಬಿಜೈ ಇವರು ಕಾರ್ಯಕ್ರಮ ನಡೆಸಿಕೊಟ್ಟರು.

ಕೊಂಕಣಿ ಮದುವೆಗಳಲ್ಲಿ ವೊವಿಯೋ, ವೇರ್ಸ್ ಮತ್ತು ಮಕ್ಕಳ ಹಾಡುಗಳು: ಈ ಕಾರ್ಯಕ್ರಮದ ಅಧ್ಯಕ್ಷಸ್ಥಾನ ಶ್ರೀ ಡೊಲ್ಫಿ ಕಾಸ್ಸಿಯಾ ವಹಿಸಿದ್ದರು. ಜೋಕಿಂ ಪಿರೇರಾ. ಶ್ರೀಮತಿ ಗ್ಲೇಡಿಸ್ ರೇಗೋ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ವಿಚಾರಮಂಡನೆ ಮಾಡಿದರು. ಈ ಕಾರ್ಯಕ್ರಮದ ನಂತರ 2ನೇ ಜಾನಪದ ಕಲಾ ಪ್ರದರ್ಶನ ಪಾಗ್ಯಾಂಚೊ

ನಾಚ್, ಮೂಳ್ ಜನಾಂಗ್ ನಾಚ್, ರೈತಾಂಚೊ ನಾಚ್-ಸೊಬಾಗಾ, ತೋಣಿಯೊ ಖೆಳ್, ಹೋಳಿ ಖೆಳ್, ಗುಮ್ಮ್ಯಾಂ, ಪದಾಂ, ವೊವಿಯೊ, ವೇರ್ಸ್, ಭುರ್ಗ್ಯಾಂಚಿಂ ಗಾಣಾಂ ಕ್ರಮವಾಗಿ ಏರ್ಪಡಿಸಿದ್ದು ಈ ಕಾರ್ಯಕ್ರಮದ ಕೊನೆಯಲ್ಲಿ 'ಫಾಲ್ಯಾಂತ್ಲಿಂ ಸಾಳ್ಕಾಂ' ಪಂಗಡದವರಿಂದ 'ಚಿರ್ಮುಟಾಂ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕೊಂಕಣಿ ಯುವ ಸಾಹಿತ್ಯ ಸಮ್ಮೇಳನ : ಈ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಯುವ ಸಾಹಿತ್ಯ ಸಮ್ಮೇಳನ ಸಮಿತಿ ಕುಂದಾಪುರ ಇವರ ಜಂಟಿ ಆಶ್ರಯದಲ್ಲಿ ಕುಂದಾಪುರದ ಪಾರಿಜಾತ ಹೋಟೆಲ್‌ನ ಶ್ರೀ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ದಿನಾಂಕ 10–8–98ರಂದು ಶ್ರೀ ಬಸ್ತಿ ವಾಮನ ಶೆಣೈ ಅವರು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಂ. ಮಾಧವ ಪೈ ಅವರು ವಹಿಸಿ, ಕೊಂಕಣಿ ಕೃತಿಕಾರರು ಸಮಾಜವನ್ನು ಪ್ರತಿಬಿಂಬಿಸುವಂಥಹ ಸಾರ್ಥಕ ಕೃತಿಗಳನ್ನು ರಚಿಸಬೇಕು ಎಂದು ತಿಳಿಸಿದರು. ಜನ ಮಾಧ್ಯಮ ಪ್ರಕಾಶನದ ಆಡಳಿತ ನಿರ್ವಾಹಕ ಫಾ। ಸಾಮ್ಯುವೆಲ್ ಸಿಕ್ವೇರಾ ಅವರು ಮುಖ್ಯ ಅತಿಥಿಯಾಗಿ ಮಾತನಾಡಿ ಕೊಂಕಣಿ ಭಾಷೆಯಿಂದ ಭಾವೈಕ್ಯತೆಯನ್ನು ಸಾಧಿಸುವ ಮೂಲಕ ಎಳೆಯ ವಯಸ್ಸಿನಲ್ಲಿಯೇ ಸಾಹಿತ್ಯ ಅಭಿರುಚಿಯನ್ನು ಮೈಗೂಡಿಸಿಕೊಳ್ಳಲು ಯುವ ಜನರಿಗೆ ಕರೆನೀಡಿದರು. ಇನ್ನೊಬ್ಬ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶಿವಮೊಗ್ಗದ ಮಾನಸಿಕ ತಜ್ಞ ಡಾ। ಅಶೋಕ ಪೈ ಅವರು ವಿಜ್ಞಾನ ಹಾಗೂ ಸಾಹಿತ್ಯ ಒಂದಕ್ಕೊಂದು ಪೂರಕವಾಗಿದೆ. ಸಾಹಿತ್ಯ ಬೆಳೆಯಬೇಕಾದರೆ ಭಾಷೆಯು ಬೆಳೆಯಬೇಕು ಭಾಷೆ ಬೆಳೆಯಬೇಕಾದರೆ ಭಾಷೆಯ ಮೇಲೆ ಪ್ರೀತಿ ಬೆಳೆಯಬೇಕು ಎಂದು ತಿಳಿಸಿದರು. ಇನ್ನೊಬ್ಬ ಮುಖ್ಯ ಅತಿಥಿ ಕುಂದಾಪುರ ಇಗರ್ಜಿಯ ಗುರುಗಳಾದ ಫಾ। ಜೆ. ಬಿ. ಕ್ರಾಸ್ತಾರವರು ಕೊಂಕಣಿ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸುವವರು ಜೊತೆಗೆ ನಮ್ಮ ಕೊಂಕಣಿ ಸಂಸ್ಕೃತಿಯಲ್ಲಿ ಪುರುಷಾರ್ಥದ ಕಲ್ಪನೆಯ ವಿಚಾರ ಮಾಡುವ ಪರಿಪಾಠವನ್ನು ಬೆಳಸಿ ಕೊಳ್ಳಬೇಕಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಕೊನೆಯಲ್ಲಿ ಕೆ. ಬಾಲಕೃಷ್ಣ ಪೈ ಮತ್ತು ಬಳಗದವರಿಂದ ನಾಟಕದ ಹಾಸ್ಯ ತುಣುಕಗಳು, ಕ್ರಿಶ್ಚಿಯನ್ ಯುವಜನರಿಂದ ಮಿಮಿಕ್ರಿ, ವಿದ್ಯಾರಂಗ ಮಿತ್ರ ಮಂಡಳಿ ಕುಂದಾಪುರ ಇವರಿಂದ ಕೋಲಾಟ ಕಾರ್ಯಕ್ರಮಗಳು ಜರುಗಿದವು. ಈ ಎಲ್ಲಾ ಕಾರ್ಯಕ್ರಮದಲ್ಲಿ ಪ್ರಭಾರ ರಿಜಿಸ್ಟ್ರಾರ್ ಎಚ್. ಸಿ. ರಂಗಪ್ಪ ಉಪಸ್ಥಿತರಿದ್ದರು.

ಕೊಂಕಣಿ ವಿಕಾಸ ಯೋಜನೆ : ಕೊಂಕಣಿ ಅಧ್ಯಯನ ವಿಚಾರಗೋಷ್ಠಿ

ಈ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸಂಸ್ಥೆ, ಇವರ ಆಶ್ರಯದಲ್ಲಿ ದಿನಾಂಕ 1–8–98ರಂದು ಮತ್ತು 2–8–98ರಂದು ಜರುಗಿತು. ಈ ಕಾರ್ಯಕ್ರಮವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ। ಎಚ್. ಶಾಂತರಾಮ್‌ರವರು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಕೆ. ವಿಶ್ವನಾಥ ಕಾಮತ್‌ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಕೊಂಕಣಿ ಅಕಾಡೆಮಿಯ ಅಧ್ಯಕ್ಷ ಶ್ರೀ ಬಸ್ತಿ ವಾಮನ ಶೆಣೈ ಅವರು ಭಾಗವಹಿಸಿದ್ದರು. ಕಾರ್ಯಕ್ರಮದ ಮೊದಲಿಗೆ ಶಿಶು ಗೀತೆ ವಾಚನ ಮತ್ತು ನಿರ್ವಹಣೆ ಇತ್ತು. ಈ ಕಾರ್ಯಕ್ರಮದ ನಂತರ ಶಿಶು ಶಿಕ್ಷಣದ ಆಯಾಮ ಎಂಬ ವಿಷಯದ ಬಗ್ಗೆ ಚರ್ಚೆ ನಡೆಯಿತು. ಎರಡನೇ ದಿನ ಪ್ರತಿನಿಧಿಗಳ ಭೇಟಿಯ ನಂತರ ಕಥಾವಾಚನ ಇದರ ಬಗ್ಗೆ ವಿಮರ್ಶೆ ನಡೆಯಿತು. ಕಥೆಯೊಂದಿಗೆ ಆಟ ಆಡಿಸುವ ಬಗ್ಗೆಯೂ ಚರ್ಚೆಗಳು ನಡೆದವು. ಈ ವಿಷಯಗಳ ಬಗ್ಗೆ ಕೈಪಿಡಿ ತಯಾರಿಸಿ ಪ್ರಕಟಪಡಿಸಲು ಯೋಜಿಸಲಾಯಿತು. ಕೊಂಕಣಿ ಶಬ್ದ ಸಂಪರ್ಕ ಮತ್ತು ಅಕ್ಷರ ವಿನ್ಯಾಸ, ಭಾಷಾ ಜ್ಞಾನ ಇವುಗಳ ಬಗ್ಗೆ ವಿಚಾರ ಮಂಡನೆಗಳು ನಡೆದವು. ಈ ಕಾರ್ಯಕ್ರಮಕ್ಕೆ ಹಲವಾರು ಶಾಲೆಗಳಿಂದ ಬಂದ ಶಿಕ್ಷಕರು ಹಾಗೂ ಮಕ್ಕಳ ತಾಯಿ, ತಂದೆ, ಹಿರಿಯರು ಭಾಗವಹಿಸಿ ಕಾರ್ಯಕ್ರಮದ ಬಗ್ಗೆ ಉಪಯೋಗ ಪಡೆದುಕೊಂಡರು. ಈ ಕಾರ್ಯಕ್ರಮದ ಬಗ್ಗೆ ಒಂದು ಶಿಕ್ಷಣ ಕೈಪಿಡಿಯನ್ನು ಹೊರತರಲಾಯಿತು.

ಕೊಂಕಣಿ ಅಭಿನಯನ, ಭಾಷಣ ಮತ್ತು ಪ್ರಬಂಧ ಸ್ಪರ್ದೆಗಳು

ಈ ಕಾರ್ಯಕ್ರಮವು ದಿನಾಂಕ 29–8–98ರಂದು ಸೈಂಟ್ ಆ್ಯನ್ಸ್ ಕಾರ್ಮೆಲ್ ಸ್ಕೂಲ್‌ನಲ್ಲಿ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೈಂಟ್ ಆ್ಯನ್ಸ್ ಕಾಲೇಜಿನ ಪ್ರಾಂಶುಪಾಲರಾದ ಸಿಸ್ಟರ್ ಮಾರಿ ಲೂಸಿ ಎ.ಸಿ., ಇವರು ವಹಿಸಿದ್ದರು. ಇವರು ಇಂಗ್ಲಿಷ್ ಭಾಷೆ ಕಲಿಕೆಯ ಈ ಹೊತ್ತಿನಲ್ಲಿ ಕೊಂಕಣಿ ಭಾಷೆಯಲ್ಲಿಯೇ ಆಯೋಜಿಸಿದ ಈ ಕಾರ್ಯಕ್ರಮವನ್ನು ನೋಡಿದಾಗ ಕೊಂಕಣಿ ಭಾಷೆಯಲ್ಲಿನ ಒಲವು ಎದ್ದು ಕಾಣುತ್ತಿತ್ತು. ಇದು ಒಂದು ಶ್ಲಾಘನಾರ್ಹ ಹೆಜ್ಜೆ ಎಂದು ಅಭಿನಯನ, ಭಾಷಣ, ಪ್ರಬಂಧ ಸ್ಪರ್ಧೆಗಳು ವಿಜೇತರಿಗೆ ಬಹುಮಾನ ವಿತರಿಸುವ ಸಂದರ್ಭದಲ್ಲಿ ಹೇಳಿದರು.

ಕನ್ನಡ–ಕೊಂಕಣಿ ಜಾನಪದ ವೈಶಿಷ್ಟ್ಯಗಳು — ವಿಚಾರ ಸಂಕಿರಣ

ಈ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮಂಗಳೂರು ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರುಗಳು ಜಂಟಿ ಆಶ್ರಯದಲ್ಲಿ ಕುಮಟಾದ ಡಾ| ಎ. ಬಿ. ಬಾಳಿಗಾ ಕಲಾ ಮತ್ತು ವಿಜ್ಞಾನ ವಿದ್ಯಾಲಯದ ಡಿಬಿಬಿ ಸಭಾಗ್ರಹದಲ್ಲಿ ದಿನಾಂಕ 19–9–98ರಂದು ಪ್ರೊ| ಎಸ್. ವಿ. ನಾಯಕ್, ಪ್ರಾಚಾರ್ಯರು, ಕುಮಟಾ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸ್ತಿ ವಾಮನ ಶೆಣೈಯವರು ವಹಿಸಿದ್ದರು. ಹಾಗೂ ಮುಖ್ಯ ಅತಿಥಿಯಾಗಿ ಕ.ಜಾ.ಮ.ಯ. ಅಕಾಡೆಮಿ ಅಧ್ಯಕ್ಷರಾದ ಡಾ| ಕಾಳೇಗೌಡ ನಾಗವರ ಇವರು ವಹಿಸಿದ್ದರು.

ವಿಚಾರ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ| ಬಿ. ಪಿ. ರಾಮಯ್ಯ ಪ್ರಾಂಶುಪಾಲರು ಕುಮಟಾ ಇವರು ವಹಿಸಿದ್ದರು.

(1) ಕನ್ನಡ ಮತ್ತು ಕೊಂಕಣಿ ಸಂಸ್ಕೃತಿಗಳ ಕೊಳು–ಕೊಡುಗೆ ಈ ವಿಷಯದ ಬಗ್ಗೆ ಡಾ। ಶಿವರಾಮ ಕಾಮತರು ಪ್ರಬಂಧ ಮಂಡಿಸಿದರು. (2) ಕೊಂಕಣಿ ಆಧುನಿಕ ಬದುಕು ಮತ್ತು ಜಾನಪದ ಈ ವಿಷಯದ ಬಗ್ಗೆ ಖ್ಯಾತ ಸಾಹಿತಿ ನಾ. ಡಿಸೋಜಾರವರು ಪ್ರಬಂಧ ಮಂಡಿಸಿದರು. ಇನ್ನೊಂದು ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಡಾ। ಶ್ರೀಪಾದ ಶೆಟ್ಟಿ, ಸದಸ್ಯರು ಕರ್ನಾಟಕ ಜಾನಪದ ಅಕಾಡೆಮಿ ಇವರು ವಹಿಸಿದ್ದರು. (3) ಕೊಂಕಣಿ ಜಾನಪದ ಮತ್ತು ಸೃಜನಶೀಲ ಕೃತಿಗಳು ಎಂಬ ವಿಷಯದ ಬಗ್ಗೆ ಡಾ। ಎಡ್ವರ್ಡ್ ನೊರಾನ್ಹಾರವರು ಪ್ರಬಂಧ ಮಂಡಿಸಿದರು. (4) ಕೊಂಕಣಿ ನಾಡಿನ ಭಾಷಾ ವೈವಿಧ್ಯತೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳು ಈ ವಿಷಯವಾಗಿ ಶಿವಮೊಗ್ಗದ ಶ್ರೀ ಎಂ. ಮಾಧವ ಪೈಯವರು ಪ್ರಬಂಧ ಮಂಡಿಸಿದರು. ನಂತರ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ। ಹಿ. ಚಿ. ಬೋರಲಿಂಗಯ್ಯ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ವಹಿಸಿದ್ದರು. ಕಾರ್ಯಕ್ರಮದ ಕೊನೆಗೆ ಶ್ರೀ ಅಪ್ಪಗೆರೆ ತಿಮ್ಮರಾಜು, ಬೆಂಗಳೂರು ಮತ್ತು ಜಿಲ್ಲೆಯ ಕೆಲವು ಜಾನಪದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗಿತ್ತು. ಈ ಕಾರ್ಯಕ್ರಮದ ಸಂಘಟನೆಯನ್ನು ಅಖಿಲ ಕರ್ನಾಟಕ ಕೊಂಕಣಿ ಪರಿಷತ್ ಕುಮಟ ಇವರು ವಹಿಸಿದ್ದರು. ಈ ಕಾರ್ಯಕ್ರಮಗಳಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಭಾರ ರಿಜಿಸ್ಟ್ರಾರ್ ಎಚ್. ಸಿ. ರಂಗಪ್ಪ ಮತ್ತು ಜಾನಪದ ಯಕ್ಷಗಾನ ಅಕಾಡೆಮಿ ರಿಜಿಸ್ಟ್ರಾರ್ ಸಿದ್ಧರಾಜು ಉಪಸ್ಥಿತರಿದ್ದರು.

ಗುಲ್‌ಬರ್ಗಾ ವಿಮೋಚನಾ ದಿನಾಚರಣೆ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಜಂಟಿ ಆಶ್ರಯದಲ್ಲಿ ಯಕ್ಷಗಾನ ಕಾರ್ಯಕ್ರಮವನ್ನು ಗುಲ್‌ಬರ್ಗಾದಲ್ಲಿ ನಡೆಸಲಾಯಿತು. ಹೈದರಾಬಾದ್ ವಿಮೋಚನಾ ದಿನದ ಸ್ವರ್ಣಜಯಂತಿಯ ಪ್ರಯುಕ್ತ ರಾಜ್ಯ ಸರಕಾರ ವಿವಿಧ ಅಕಾಡೆಮಿಗಳ ಸಹಯೋಗದೊಂದಿಗೆ ಜರುಗಿದ ಸಮಾರಂಭದಲ್ಲಿ ಅಕಾಡೆಮಿ ಅಧ್ಯಕ್ಷರಾದ ಜಸ್ತಿ ವಾಮನ ಶೆಣೈ ಹಾಜರಿದ್ದರು. ಕಾರ್ಯಕ್ರಮ ನಡೆಯುವ ದಿನದಂದು ತುಳು ಸಾಹಿತ್ಯ ಅಕಾಡೆಮಿ ಪ್ರಭಾರ ರಿಜಿಸ್ಟ್ರಾರ್ ಎಸ್. ಎಚ್. ಶಿವರುದ್ರಪ್ಪ, ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಭಾರ ರಿಜಿಸ್ಟ್ರಾರ್ ಎಚ್. ಸಿ. ರಂಗಪ್ಪ ಹಾಜರಿದ್ದರು.

ಸಾಹಿತ್ಯ ಕೃತಿ ಪುರಸ್ಕಾರ : 1995–96ನೇ ಸಾಲಿನಲ್ಲಿ ಪ್ರಕಟಿಸಿದ ಅತ್ಯುತ್ತಮ ಪುಸ್ತಕಗಳಿಗೆ ಪುರಸ್ಕಾರ ನೀಡುವ ಯೋಜನೆಯಲ್ಲಿ ಒಟ್ಟು 20 ಪುಸ್ತಕಗಳು ಬಂದಿದ್ದು ಅದರಲ್ಲಿ ಗೌರೀಶ ಕಾಯ್ಕಿಣಿಯವರ (ಮೀನಾಕ್ಷಿ) ಕವನ ಸಂಕಲನಕ್ಕೆ ಹಾಗೂ ಡಾ। ಎಡ್ವರ್ಡ್ ನಜರೆತ್ ಇವರ ಕಥಾ ಸಂಕಲನಕ್ಕೆ (ಭುಮಿ ವೈಕುಂಠಾಂತ್) ಪುರಸ್ಕಾರ ನೀಡಲಾಯಿತು. ಈ ಪುರಸ್ಕಾರದ ಮೊತ್ತ ರೂ 5000–00ಗಳನ್ನು, ವಿಜೇತರಿಗೆ ಪ್ರಶಸ್ತಿ ಪತ್ರ ಹಾಗೂ ಫಲ ಪುಷ್ಪಗಳನ್ನು ನೀಡಲಾಗಿತ್ತು. ಈ ಪುರಸ್ಕಾರವನ್ನು ಸಣ್ಣ ಕೈಗಾರಿಕಾ ಖಾತೆ ಸಚಿವರಾದ ಮಾನ್ಯ ಶ್ರೀ ಬಿ. ಎ. ಮೊಯಿದೀನ್‌ರವರು ಪ್ರದಾನಗೈದರು. ಮುಖ್ಯ ಅತಿಥಿಯಾಗಿ ಮಂಗಳೂರಿನ

ಜನಪ್ರಿಯ ಶಾಸಕರಾದ ಶ್ರೀ ಎನ್. ಯೋಗೀಶ್ ಭಟ್‌ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಂಕಣಿ ಅಕಾಡೆಮಿ ಅಧ್ಯಕ್ಷ ಶ್ರೀ ಬಿ. ವಿ. ಬಾಳಿಗಾ ಇವರು ವಹಿಸಿದ್ದರು.

ಮಾಂಡ್ ಸೊಭಾಣ್ ಸಂಸ್ಥೆಯವರು ವೇದಿಕೆಯನ್ನು ಕೊಂಕಣಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಅಚ್ಚುಕಟ್ಟಾಗಿ ನಿರ್ಮಿಸಿದ್ದರು. ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ನಡೆಸಿಕೊಟ್ಟಿದ್ದರು.

ಪುಸ್ತಕ ಪ್ರಕಟಣೆಗೆ ಅನುದಾನ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಪುಸ್ತಕ ಪ್ರಕಟಣೆಗೆ ಅನುದಾನ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಸಾಹಿತಿಗಳು ಕಳುಹಿಸಿದ ಹಸ್ತಪ್ರತಿಗಳನ್ನು ಸಂಪಾದಕ ಮಂಡಳಿಗೆ ಕಳುಹಿಸಿ ಅವರಿಂದ ಬಂದ ಶಿಫಾರಸ್ ಮೇರೆಗೆ ಶೇ 25ರಿಂದ 40ರ ವರೆಗೆ ಅನುದಾನವನ್ನು ನೀಡುತ್ತಾ ಬಂದಿದೆ. ತಮ್ಮ 50 ಪುಸ್ತಕ ಪ್ರತಿಗಳನ್ನು ಅಕಾಡೆಮಿಗೆ ನೀಡುವ ಮೂಲಕ ಕೆನರಾ ಅಸೋಸಿಯೇಷನ್, ಇವರು ಪ್ರಕಟಿಸಿದ 7 ಮಕ್ಕಳ ಬೋಧೆ ಪುಸ್ತಕಗಳಾದ (1) ಮಹಾತ್ಮ ಅಮ್ಮೆಂಬಳ ಸುಬ್ರಾಯ ಪೈ (2) ಎಂ. ಎಸ್. ಕಾಮತ್ (3) ವಾಸುದೇವ ರಾವ್ (4) ಶೆಣ್ಯೆ ಗೊಂಯ್‌ಬಾಬ್ (5) ಡಾ| ಟಿ. ಮಾಧವ ಪೈ (6) ಕಾರ್ನಾಡ್ ಸದಾಶಿವ ರಾವ್ (7) ಅಮರ್ ಚಾ. ಫ್ರಾ. ದೆಕೋಸ್ತಾ ಇವುಗಳಿಗೆ ಶೇಕಡ 40 ರಷ್ಟು ಅನುದಾನ ನೀಡಿ ಪುಸ್ತಕ ಪ್ರಕಟಣೆಗೆ ಸಹಾಯ ಮಾಡಿದೆ (ರೂ. 12,500–00).


1. ಶ್ರೀ ಪಿ. ವಾಮನ ಪ್ರಭು ಕಾರ್ಕಳ ಇವರ "ಮಹಾಕವಿ ಕಾಳಿದಾಸ" ವಿರಚಿತ ರಾಘು ವಂಶ ಭಾಷಾಂತರಕ್ಕೆ ಶೇಕಡ 40ರಷ್ಟು ಅನುದಾನ ನೀಡಿದೆ (ರೂ. 13,600).
2. ಡಾ| ಎಡ್ವರ್ಡ್ ಎಲ್. ನಜರೆತ್ ಇವರ ಪುಸ್ತಕ "ಸಂಯ್ಯಾಬಚೆಂ ಪಾತಕ್" ಪುಸ್ತಕಕ್ಕೆ 40ರಷ್ಟು ಅನುದಾನ ನೀಡಿದೆ (ರೂ. 10,000).
3. ಶ್ರೀಮತಿ ಗ್ಲೇಡಿಸ್ ರೇಗೊ ಇವರ ಪುಸ್ತಕ "ಕುರು ಕುರು ಕಾನಾ" (ರೂ. 5472–00).
4. ರೆ| ಫಾ| ಲಿಯೊ ಕುಟಿನೋ ಇವರ "ಶೆಂಬೊರ್ ಘುಡಿತಾಂ ಪಾಟ್ಲಿಂ ಲಿಸಾಂವಾಂ" ಪುಸ್ತಕಕ್ಕೆ 40ರಷ್ಟು ಅನುದಾನ ನೀಡಿ ಸಹಾಯ ಮಾಡಲಾಗಿದೆ. (ರೂ. 5,600–00).
5. ಶ್ರೀ ಹೊಸಾಡ ಬಾಬುಟಿ ನಾಯಕರವರ ಋಣಾನುಬಂಧ ನಾಟಕಗಳನ್ನು ಸ್ನೇಹ ಪಬ್ಲಿಕೇಷನ್‌ರವರು ಮುದ್ರಿಸುವುದಕ್ಕೆ (ರೂ. 12,670–00).
6. ಶ್ರೀವಾಸುದೇವ ಶ್ಯಾನುಭಾಗ ಶಿರಸಿ ಇವರು ಬರೆದ ಮೂರು ನಾಟಕ – ಸಂಗಮ (ರೂ. 7800–00).
7. ಶ್ರೀ ಆ್ಯನ್ಸಿ ಪಾಲಡ್ಕ ಇವರ ಕವನ ಸಂಗ್ರಹ ಪುಸ್ತಕಕ್ಕೆ "ಚಿರ್ಪುಟಾಂ" (ರೂ. 23,660–00)
8. ಕೆನರಾ ಅಸೋಸಿಯೇಷನ್‌ರವರು ಮುದ್ರಿಸಿದ ಮೂಲ್ಕಿ ಬಂಗ್ಲಾ ನಾರಾಯಣ ಕಾಮತರ 'ಗೀತಾಮೃತ ಸಾಕೀ' ಎಂಬ ಪುಸ್ತಕಕ್ಕೆ ಪುನರ್ ಮುದ್ರಣಕ್ಕಾಗಿ (ರೂ 15,000).

9. ಡಾ। ಎಡ್ವರ್ಡ್ ನಜರೆತ್ ಇವರ 'ಭುರ್ಗ್ಯಾಂಚಿ ಜತನ್' ಎಂಬ ಪುಸ್ತಕಕ್ಕೆ (ರೂ. 19,300–00).

10. ಕರ್ನಾಟಕ ರಾಜ್ಯ ಕೊಂಕಣಿ ಅಲ್ಪ ಸಂಖ್ಯಾತರ ಸಂಘ ಸಂಸ್ಥೆಯ ಮಕ್ಕಳ ಹಾಡು – ಆಟ ಕಥೆಗಳನ್ನು ಶಿಕ್ಷಕರಿಗಾಗಿ ಮುದ್ರಿಸಲು ಶಿಕ್ಷಣ ಕೈಪಿಡಿ ಮುದ್ರಣಕ್ಕೆ ಸಹಾಯ ಮಾಡಿದೆ. (ರೂ. 15,300–00)

ಪುಸ್ತಕ ಸಗಟು ಖರೀದಿ

ಅಕಾಡೆಮಿಯು 1995, 96, 97ನೇ ಸಾಲಿನಲ್ಲಿ ಲೇಖಕರಿಂದ 50 ಪ್ರತಿಗಳನ್ನು ಶೇ. 20 ಸೋಡಿ ಬಿಟ್ಟು ಖರೀದಿಸುತ್ತಾ ಬಂದಿರುತ್ತದೆ. ಈ ವರೆಗೆ ಸುಮಾರು 50 ಪುಸ್ತಕಗಳನ್ನು 50 ಪ್ರತಿಗಳಂತೆ ಖರೀದಿಸಿದ್ದು ಅವುಗಳನ್ನು ಕರ್ನಾಟಕ ರಾಜ್ಯದ ಕೊಂಕಣಿ ಸಂಘ–ಸಂಸ್ಥೆಗಳಿಂದ ನಡೆಸಲ್ಪಡುವ ಶಾಲಾ ಕಾಲೇಜುಗಳ ಗ್ರಂಥಾಲಯಗಳಿಗೆ ಮತ್ತು ಸಾರ್ವಜನಿಕ ಗ್ರಂಥಾಲಯಗಳಿಗೆ ಉಚಿತವಾಗಿ ವಿತರಿಸಲಾಗಿದೆ.



ದಿನಾಂಕ 5–10–98ರಂದು ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ 'ಮೀಟ್ ದಿ ಆಥರ್' ಕಾರ್ಯಕ್ರಮವನ್ನು ಅಕಾಡೆಮಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಈ 'ಮೀಟ್ ದಿ ಆಥರ್' ಕಾರ್ಯಕ್ರಮದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಬಿ. ವಿ. ಬಾಳಿಗಾ ಅವರೊಂದಿಗೆ ಸಂದರ್ಶನವನ್ನು ಏರ್ಪಡಿಸಲಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಭತ್ತಾಂಬಿಕರ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮೊನ್ಸಿಂಞೋರ್ ಅಲೆಗ್ಸಾಂಡರ್ ಎಫ್. ಡಿಸೋಜಾ ಇವರು ಶ್ರೀ ಬಿ. ವಿ. ಬಾಳಿಗಾರವರನ್ನು ಶಾಲು ಹೊದಿಸಿ

ಸನ್ಮಾನಿಸಿದರು. ಶ್ರೀ ಬಿ. ವಿ. ಬಾಳಿಗಾರವರ ಜೀವನ ಚರಿತ್ರೆಯನ್ನು ಬರೆಯಲು ಯಾರಾದರೂ ಮುಂದೆ ಬಂದರೆ ಉತ್ತಮ ಎಂದು ಶ್ರೀಮತಿ ಕನ್ಸೆಪ್ಟಾ ಆಳ್ವಾರವರು ಸಲಹೆ ಮಾಡಿದಾಗ ಸಭಿಕರಾಗಿ ಹಾಜರಿದ್ದ ಕು। ಮಿಜಾರು ಲಕ್ಷ್ಮೀ ಪೈ, ಶ್ರೀ ಬಿ. ವಿ. ಬಾಳಿಗಾರ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸಲು ಮುಂದೆ ಬಂದರು. ಇದೇ ಸಂದರ್ಭದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯಲ್ಲಿ ಪ್ರಭಾರ ರಿಜಿಸ್ಟ್ರಾರ್ ಆಗಿದ್ದು ಈಗ ಚಿಕ್ಕಮಗಳೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿರುವ ಶ್ರೀ ಎಂ. ಎಸ್. ಚಂದ್ರಪ್ಪರವರನ್ನು ಶಾಲು ಹೊದಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದ ಉದ್ದೇಶವನ್ನು ಶ್ರೀ ಪ್ರಕಾಶ್ ಭತ್ತಾಂಬಿಕರ್ ವಿವರಿಸಿದರು. ಅಕಾಡೆಮಿಯ ಪ್ರಭಾರಿ ರಿಜಿಸ್ಟ್ರಾರ್ ಆದ ಶ್ರೀ ಎಚ್. ಸಿ. ರಂಗಪ್ಪ ವಂದಿಸಿದರು.

ಸಂಗೀತ ಕ್ಷೇತ್ರದಲ್ಲಿ ಅಕಾಡೆಮಿ ಸಾಧನೆ

1. ಮಂಗಳೂರಿನ ಮಾಂಡ್ ಸೊಭಾಣ್ ಸಂಸ್ಥೆಯು ಏರ್ಪಡಿಸಿದ್ದ 'ಪುನವ್' ಕಾರ್ಯಕ್ರಮದಲ್ಲಿ ಭಾಗವಹಿಸಿದ ಶ್ರೀಮತಿ ವಸಂತಿ ಆರ್. ನಾಯಕ್, ಶ್ರೀಮತಿ ಅನುರಾಧ ಧಾರೇಶ್ವರ್, ಶ್ರೀ ಮೆಲ್ವಿನ್ ಪೆರಿಸ್, ಶ್ರೀ ಅನಿಲ್ ಮತ್ತು ಜೋನ್ ಪತ್ರಾವೊ, ಶ್ರೀ ಪುತ್ತೂರು ನರಸಿಂಹ ನಾಯಕ್ ಇವರುಗಳು ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮಕ್ಕೆ ಗೌರವ ನೀಡಿ ಪ್ರಾಯೋಜಕರಾಗಿ ಕೊಂಕಣಿ ಸಂಗೀತಕ್ಕೆ ಪ್ರೋತ್ಸಾಹ ನೀಡಲಾಗಿದೆ.

2. ಮುಂಬಾಯಿಯಲ್ಲಿ 20ನೇ ಅಖಿಲ ಭಾರತ ಕೊಂಕಣಿ ಅಧಿವೇಶನ, ಕೊಂಕಣಿ ಪರಿಷತ್ ಸಂಸ್ಥೆಯು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಭಾಗವಹಿಸಿ ಸಂಗೀತ ಮತ್ತು



ಜಾನಪದ ಕಲಾವಿದರಿಂದ ಕಾರ್ಯಕ್ರಮಗಳನ್ನು ನೀಡಿ ಸಹಯೋಗ ಕೊಟ್ಟಿರುತ್ತದೆ. ಈ ಕಾರ್ಯಕ್ರಮವು ಕೊಂಕಣಿ ಭಾಷಾಮಂಡಳಿ ಮುಂಬಾಯಿ ಮತ್ತು ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಜರುಗಿರುತ್ತದೆ.

ನಾಟಕ ಕ್ಷೇತ್ರ : ನಾಟಕ ಕ್ಷೇತ್ರದಲ್ಲಿ ಮಂಗಳೂರಿನ ದೇರೆಬೈಲ್ ಕಲಾವಿದರಿಗೆ ಬೆಂಗಳೂರಿನಲ್ಲಿ ನಾಟಕ ಪ್ರದರ್ಶನಕ್ಕಾಗಿ ಧನ ಸಹಾಯ ನೀಡಲಾಗಿದೆ.

ಬೆಂಗಳೂರಿನಲ್ಲಿ ನಡೆದ ನಾಟಕ ಕಾರ್ಯಾಗಾರ

ಈ ಕಾರ್ಯಕ್ರಮವು ದಿನಾಂಕ 18-8-97ರಂದು ಬೆಳಿಗ್ಗೆ 9.00 ಗಂಟೆಗೆ ಬೆಂಗಳೂರಿನ ಮಲ್ಲೇಶ್ವರಂನ ಕೆನರಾ ಯೂನಿಯನ್ ಸಭಾಂಗಣದಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಭಾಷಾ ಮಂಡಳಿ(ರಿ) ಬೆಂಗಳೂರು ಇವರ ಸಹಯೋಗದಲ್ಲಿ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರಿನ ಖ್ಯಾತ ಉದ್ಯಮಿಯಾದ ಶ್ರೀ ಪಿ. ದಯಾನಂದ ಪೈಯವರು ವಹಿಸಿದ್ದರು. ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಸ್ತಿ ವಾಮನ ಶೆಣೈಯವರು ಮುಖ್ಯ ಅತಿಥಿಯಾಗಿದ್ದರು. ಉದ್ಘಾಟನಾ ಸಮಾರಂಭಕ್ಕೆ ಕೊಂಕಣಿ ಭಾಷಾ ಮಂಡಳಿ (ಬೆಂ) ಇವರ ಅಧ್ಯಕ್ಷರಾದ ಶ್ರೀ ಸಿಡ್ನಿ ಮೆಂಡಿಸ್ ಅವರು ಸ್ವಾಗತ ಕೋರಿದರು. ನಾಟಕಕಾರ ಶ್ರೀ ಸುಧೀರ್ ನಾಡಕರ್ಣಿಯವರು ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದ ಮೊದಲನೇ ದಿನ ಕನ್ನಡ ನಾಟಕ ತಂಡಗಳಲ್ಲಿ ಹೆಸರು ಗಳಿಸಿದ ಕಾಸರಗೋಡು ಚಿನ್ನಾ ಮತ್ತು ಮೇಕಪ್ ನಾಣಿ ಇವರು ಶಿಬಿರಾರ್ಥಿಗಳಿಗೆ ನಾಟಕದ ಮೂಲ ಶಿಕ್ಷಣ ಮತ್ತು ಅಂಗ ಅಭಿನಯದ ಬಗ್ಗೆ ತರಬೇತಿ ನೀಡಿದರು. ಉಳಿದ ಮೂರು ದಿನಗಳಲ್ಲಿ ಹೆಸರಾಂತ ನಾಟಕ ತರಬೇತಿದಾರ ರಾಷ್ಟ್ರೀಯ ನಾಟಕ ಶಾಲೆಯ ಮುಖ್ಯಸ್ಥರಾದ ಶ್ರೀ ಜಯದೇವ ಹಟ್ಟಂಗಡಿ ಇವರು ನಾಟಕ ರಚನೆ, ದಿಗ್ದರ್ಶನ ಮತ್ತು ನಟನೆಯ ಬಗ್ಗೆ ವಿವರವಾಗಿ ಉಚ್ಚಮಟ್ಟದ ಶೈಲಿಯಲ್ಲಿ ಹಾಗೂ ತಮ್ಮ ನೈಜ ಶೈಲಿಯಲ್ಲಿ ಅಭಿನಯಿಸುವ ಮುಖಾಂತರ ಶಿಬಿರಾರ್ಥಿಗಳಿಗೆ ತರಬೇತಿ ನೀಡಿದರು.

ಈ ಕಾರ್ಯಕ್ರಮದ ಶಿಬಿರಾರ್ಥಿಗಳಾಗಿ ಕರ್ನಾಟಕದ ಮೂಲೆ ಮೂಲೆಗಳಿಂದ 30 ಜನ ಶಿಬಿರಾರ್ಥಿಗಳು ತುಂಬಾ ಉತ್ಸಾಹದಿಂದ ಪಾಲ್ಗೊಂಡು ತರಬೇತಿ ಪಡೆದುಕೊಂಡದಲ್ಲದೆ ತಮ್ಮ ತಮ್ಮ ಪರಿಸರದಲ್ಲಿ ನಾಟಕ ಕಲೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿಕೊಳ್ಳುವ ಬಗ್ಗೆ ಉತ್ಸಾಹ ತೋರಿಸಿದರು.

ನಾಟಕ ಅಭಿನಯ ತರಬೇತಿ ಕಾರ್ಯಾಗಾರ

ಈ ನಾಟಕ ಅಭಿನಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಯುವ ವಿದ್ಯಾರ್ಥಿ ಸಂಚಲನ (ವೈ.ಸಿ.ಎಸ್, ವೈ.ಎಸ್.ಎಂ) ಮಂಗಳೂರು ಇವರ ಸಹಯೋಗದಲ್ಲಿ 'ಸೆಸ್ಕಾ' ತಂಡದವರಿಂದ ಮಂಗಳೂರಿನಲ್ಲಿರುವ ಕುಲಶೇಖರದ ಸೇಕ್ರೆಡ್ ಹಾರ್ಟ್ ಶಾಲಾ ಸಭಾಂಗಣದಲ್ಲಿ ದಿನಾಂಕ 26-4-98ರಿಂದ 7-5-98ರ ವರೆಗೆ

ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷರು ರೆ! ಫಾ! ವಲೇರಿಯನ್ ಡಿಸೋಜಾ. ಶ್ರೀ ಬಸ್ತಿ ವಾಮನ ಶಣೈಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರೆ! ಫಾ! ಆಲ್ವಿನ್ ಡಿ'ಸೋಜಾ ಮತ್ತು ಶ್ರೀ ರಾಜಶೇಖರ್ ಇವರುಗಳು ಭಾಗವಹಿಸಿದ್ದರು.

ಕೊಂಕಣಿ ನಾಟಕ ನಿರ್ದೇಶಕರ ತರಬೇತಿ ಕಾರ್ಯಕ್ರಮ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ಮಾಂಡ್ ಸೊಭಾಣ್ ಸಂಸ್ಥೆ ಹಾಗೂ ನ್ಯಾಶನಲ್ ಇನ್ಸಿಟ್ಯೂಟ್ ಆಫ್ ಡ್ರಾಮಾ (ಎನ್.ಎಸ್.ಡಿ) ರೀಜನಲ್ ರಿಸೋರ್ಸ್ ಸೆಂಟರ್ ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ 22-8-98ರಿಂದ 16-9-98ರ ವರೆಗೆ ಪ್ಯಾಸ್ಟರಲ್ ಸೆಂಟರ್ ಬಜ್ಜೋಡಿ ಮಂಗಳೂರು ಇಲ್ಲಿ ಜರುಗಿತು. ಈ ಕಾರ್ಯಕ್ರಮವನ್ನು ಮಾನ್ಯ ಶ್ರೀ ಲುವಿ ಜೆ. ನೆಟ್ಟೋ ಇವರು ಉದ್ಘಾಟಿಸಿದರು. ಶ್ರೀ ಬಸ್ತಿ ವಾಣಿ ಶೆಣೈ ಇವರು ಮುಖ್ಯ ಅತಿಥಿಯಾಗಿದ್ದರು.

ಶ್ರೀ ವಾಲ್ಟರ್ ಡಿಸೋಜಾ (ಎನ್.ಎಸ್.ಡಿ) ಇವರು ಕಾರ್ಯಕ್ರಮದ ನಿರ್ದೇಶಕರಾಗಿದ್ದು ಇವರಿಗೆ ಸಹಾಯಕರಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುರೇಶ ಆನಗಳ್ಳಿ, ಇಕ್ಬಾಲ್ ಅಹಮದ್, ಬಸವಲಿಂಗಪ್ಪ, ಎಸ್. ಕೃಷ್ಣಮೂರ್ತಿ, ಕು! ಭಾಗೀರಥಿ ಇವರುಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 11 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಸಂಘ–ಸಂಸ್ಥೆಗಳಿಗೆ ಅನುದಾನ:

1. ಕೆನರಾ ಹೈಸ್ಕೂಲ್ ಅಸೋಸಿಯೇಶನ್, ಡೊಂಗರಕೇರಿ, ಮಂಗಳೂರು.

ಇವರು ಅಮ್ಮೆಂಬಾಳ ಸುಬ್ಬರಾವ್ ಪೈ ಸಂಸ್ಮರಣ ಸಪ್ತಾಹ ಈ ಕಾರ್ಯಕ್ರಮವನ್ನು ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ದಿನಾಂಕ 19-11-96ರಿಂದ 25-11-98ರ ವರೆಗೆ ಏರ್ಪಡಿಸಿದ್ದು **'ಅಮ್ಮೆಂಬಾಳ್ ಸುಬ್ಬರಾವ್ ಪೈ ಕೊಂಕಣಿ ಪುಸ್ತಕ ಮಾಲೀಕಾ'** ಈ ಕಾರ್ಯಕ್ರಮ ದಿನಾಂಕ 19-11-96ರಂದು ಸಂಜೆ 5.00 ಗಂಟೆಗೆ 'ಸುಕೃತೀಂದ್ರ' ಸಭಾಭವನ ಕೆನರಾ ಹೈಸ್ಕೂಲ್ ಮೈಯಿನ್ ಇಲ್ಲಿ ಸಂತ ಭದ್ರಗಿರಿ ಅಚ್ಯುತದಾಸ್‌ಜಿ ಇವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಸಮಾರಂಭದ ಅಧ್ಯಕ್ಷರಾಗಿ ಶ್ರೀ ಕೆ. ಪಿ. ಕಸ್ತೂರಿ, ಮುಖ್ಯ ಅತಿಥಿಯಾಗಿ ಶ್ರೀ ಬಿ. ವಿ. ಬಾಳಿಗಾ ಮತ್ತು ಶ್ರೀ ಎಂ. ರಘುನಾಥ ಶೇಟ್ ಭಾಗವಹಿಸಿದ್ದರು.

ಅಮ್ಮೆಂಬಾಳ್ ಸುಬ್ಬರಾವ್ ಪೈ ಸ್ಮಾರಕ ಭಾಷಣ

ಈ ಸಮಾರಂಭದ ಮುಖ್ಯ ಅತಿಥಿಯಾಗಿ ಮಣಿಪಾಲದ ಶ್ರೀ ಕೆ. ಕೆ. ಪೈ ಮತ್ತು ಭಾಷಣಕಾರರಾಗಿ ಶ್ರೀ ಪುತ್ತೂರು ಕೃಷ್ಣಮೂರ್ತಿ, ಇವರು ಶ್ರೀ ಸುಬ್ಬರಾವ್ ಪೈ ಪುರಾಣ ಪುರುಷ ಮತ್ತು ಆತನ ಸವಿನುಡಿಗಳು ಎಂಬ ವಿಷಯದ ಬಗ್ಗೆ ಮಾತಾನಾಡಿದರು.

ದಕ್ಷಿಣ ಕನ್ನಡದಲ್ಲಿ ನವ ವಿಚಾರ ಜಾಗೃತಿ ಎಂಬ ವಿಷಯದ ಬಗ್ಗೆ ಡಾ। ಸೂರ್ಯನಾಥ ಕಾಮತ್ ಇವರು ಭಾಷಣ ಮಾಡಿದರು. ಕೊಂಕಣಿ ಜಾನಪದ ಕಲಾ ಉತ್ಸವದಲ್ಲಿ ಕ್ರಮವಾಗಿ :

1. ಕೊಂಕಣಿಯಲ್ಲಿ ಹರಿಕಥೆಯನ್ನು ಸಂತ ಭದ್ರಗಿರಿ ಅಚ್ಯುತದಾಸ್‌ಜೀ ಇವರು ನಡೆಸಿಕೊಟ್ಟರು.
2. ಕೊಂಕಣಿ ಸುಗಮ ಮತ್ತು ಜಾನಪದ ಸಂಗೀತ ಈ ಕಾರ್ಯಕ್ರಮವನ್ನು ಶ್ರೀಮತಿ ವಸಂತಿ ಆರ್. ನಾಯಕ ಮತ್ತು ಬಳಗದವರು ನಡೆಸಿಕೊಟ್ಟರು. ಮುಖ್ಯ ಅತಿಥಿ ಪದ್ಮಾ ಶೆಣೈ ಇದ್ದರು.
3. ಮಾಂಡ್ ಸೊಭಾಣ್ ಸಂಗೀತ ಕಾರ್ಯಕ್ರಮವನ್ನು ಶ್ರೀ ಎರಿಕ್ ಒಝೇರಿಯೊರವರು ನಡೆಸಿಕೊಟ್ಟರು. ಮುಖ್ಯ ಅತಿಥಿಯಾಗಿ ಶ್ರೀಮತಿ ಲೀನಾ ಫೆರ್ನಾಂಡಿಸ್ ಭಾಗವಹಿಸಿದ್ದರು.
4. ಗುಮ್ಟಾ ಘಾಂಗ್ ಎಂಬ ಕಾರ್ಯಕ್ರಮವನ್ನು ಅಂಕೋಲದ ಶ್ರೀ ಗೋವಿಂದ ನಾರಾಯಣ ಮಹಾಲೆಯವರು ನಡೆಸಿಕೊಟ್ಟರು. ಮುಖ್ಯ ಅತಿಥಿಯಾಗಿ ಶ್ರೀ ಬಿ. ದಾಮೋದರ ಪ್ರಭು ಭಾಗವಹಿಸಿದ್ದರು.
5. ವಿದ್ಯಾರಂಗ ಮಿತ್ರಮಂಡಳಿ ಕುಂದಾಪುರ ಇವರಿಂದ 'ಖಾರ್ವಿಂಗೆಲೆ ನೃತ್ಯ' ಕಾರ್ಯಕ್ರಮ ಏರ್ಪಡಿಸಿತ್ತು.
6. ಶ್ರೀ ನಂದಕುಮಾರ ಪೈ ಮತ್ತು ಪಂಗಡ ಇವರಿಂದ ಮಕ್ಕಳ ಯಕ್ಷಗಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀ ಕುಡ್ಪಿ ಜಗದೀಶ್ ಶೆಣೈಯವರು ಮುಖ್ಯ ಅತಿಥಿಯಾಗಿದ್ದರು.
7. ಉಪ್ಪಿನಕುದ್ರು ಕೊಗ್ಗ ಕಾಮತ್ ಇವರಿಂದ ಯಕ್ಷಗಾನ ಬೊಂಬೆಯಾಟ ಕಾರ್ಯಕ್ರಮ ನೀಡಲಾಯಿತು. ಇದರ ಅಧ್ಯಕ್ಷತೆಯನ್ನು ಶ್ರೀ ಬಿ. ಗಣಪತಿ ಪೈ ಮುಖ್ಯ ಅತಿಥಿಯಾಗಿ ಡಾ। ಕಸ್ತೂರಿ ಮೋಹನ್ ಪೈ ಶ್ರೀ ರಾಮಶೇಷ ಶೆಟ್ಟಿ ಇವರು ಭಾಗವಹಿಸಿದ್ದರು.

ವಿಜ್ಞಾನ ಮೇಳ:

ಈ ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳೂರು ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಸಂತ ಅಲೋಶಿಯಸ್ ಕಾಲೇಜಿನಲ್ಲಿ ದಿನಾಂಕ 26–10–96ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗುಮ್ಟಾಂ, ತೋಣೆಯೊ, ದೋರಿ ಖೆಳ್ ಇವುಗಳನ್ನು ಸಾದರಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ ಗೋಪಾಲ್ ಗೌಡ ಮತ್ತು ಪಂಗಡದವರು ನಡೆಸಿಕೊಟ್ಟರು.

ಬೆಂಗಳೂರಿನಲ್ಲಿ ಕೊಂಕಣಿ ಕಲಾ ಉತ್ಸವ:



ಭಾರತದ ಸ್ವಾತಂತ್ರ್ಯದ 50ನೇ ವಾರ್ಷಿಕ ಸಮಾರಂಭದ ಅಂಗವಾಗಿ ಬೆಂಗಳೂರಿನಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ 20–8–97ರಂದು ಬೆಂಗಳೂರು ನಗರ ರವೀಂದ್ರ ಕಲಾಕ್ಷೇತ್ರದಲ್ಲಿ 'ಕೊಂಕಣಿ ಕಲಾ ಉತ್ಸವ' ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಕರ್ನಾಟಕ ಸರಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಸನ್ಮಾನ್ಯ ಶ್ರೀ ಆರ್. ವಿ. ದೇಶಪಾಂಡೆ ಇವರು ಭಾಗವಹಿಸಿದ್ದರು.

ಬಳಿಕ ಕೊಂಕಣಿ ಕಲಾವಿದರುಗಳ ಪ್ರತಿಭೆಯನ್ನು ಪರಿಚಯ ಮಾಡಲು ಸಂಜೆ 5.30ಕ್ಕೆ ಉತ್ತರ ಕನ್ನಡದ ಗುಮ್ಟಾ ಘಾಂಗ್, ಮಕ್ಕಳ ಯಕ್ಷಗಾನ, ಬಯಲಾಟ, ಯಲ್ಲಾಪುರ ಸಿದ್ದಿಗಳ ದಮ್ಮಾಮ್ ಧಪ್, ಫುಗ್ಡಿ ನೃತ್ಯ, ಕುಂದಾಪುರದ ಗೊಂಬೆಯಾಟ, ಕುಡುಂಬಿಗಳ ಸಿಗ್ಮೊ, ದೊರಿಯೆ ಖೆಳ್, ಕೊಂಕಣಿ ಕ್ರಿಶ್ಚಿಯನ್ನರ ಬೈಲಾ ಡ್ಯಾನ್ಸ್ ಮತ್ತು ಕೊಂಕಣಿ ಸಂಗೀತಗಳ ಕಲಾ ಪ್ರದರ್ಶನಗಳನ್ನು ಏರ್ಪಾಡಿಸಲಾಗಿತ್ತು.

ದೆಹಲಿಯಲ್ಲಿ ಕೊಂಕಣಿ ಕಲಾ ಉತ್ಸವ:

ಪ್ರಪ್ರಥಮವಾಗಿ ನವದೆಹಲಿಯ ಕೊಂಕಣಿ ಭಾಷಿಕರ ಬಹುದಿನಗಳ ಬೇಡಿಕೆಯಂತೆ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ 1998 ಸೆಪ್ಟೆಂಬರ್ 4, 5 ಮತ್ತು 6ರಂದು ದೆಹಲಿಯಲ್ಲಿ ಕೊಂಕಣಿ ಕಲಾ ಉತ್ಸವವನ್ನು ಪ್ರತಿಷ್ಠಿತ ಮಾವಳಂಕರ ಆಡಿಟೋರಿಯಮ್ ಸಭಾಂಗಣದಲ್ಲಿ ಏರ್ಪಡಿಸಲಾಯಿತು. ಇದರಲ್ಲಿ ದಿಲ್ಲಿಯ ಗೌಡ ಸಾರಸ್ವತ ಸಂಘ, ಸಾರಸ್ವತ ಅಸೋಸಿಯೇಶನ್, ಕೆನರಾ ಕಲ್ಚರಲ್ ಅಸೋಸಿಯೇಶನ್, ಕೊಂಕಣಿ ಅಸೋಸಿಯೇಶನ್ ಸಂಸ್ಥೆಗಳ ಅಧ್ಯಕ್ಷರು ಮತ್ತು ಸದಸ್ಯರೊಳಗೂಡಿ ಅವರ ಸರ್ವ ಸಂಪನ್ಮೂಲಗಳಿಂದ ಪ್ರತ್ಯಕ್ಷಪೂರ್ವಕ ಸಹಭಾಗಿಗಳಾಗಿ ಕಲಾ ಉತ್ಸವ ನಡೆಸಿಕೊಟ್ಟರು. ಸಾರಸ್ವತ ಸಂಸ್ಕೃತಿ ಮಂಡಳಿಯ ಹಿರಿಯರು ಕರ್ನಾಟಕದಿಂದ ಬಂದ 130 ಮಂದಿ ಕಲಾವಿದರುಗಳ ಊಟ, ವಸತಿ ಮತ್ತು ಸ್ಥಳೀಯ ಪ್ರಯಾಣದ ವ್ಯವಸ್ಥೆಯನ್ನು ತಮ್ಮ ಸಂಸ್ಥೆಯ ವತಿಯಿಂದ ಮಾಡಿದರು.

ಸೆಪ್ಟೆಂಬರ್ 4ರಂದು ಸಂಜೆ ಕೊಂಕಣಿ ಕಲಾ ಉತ್ಸವವನ್ನು ದಿಲ್ಲಿ ರಾಜ್ಯದ ಸನ್ಮಾನ್ಯ ಲೆಫ್ಟಿನೆಂಟ್ ಗವರ್ನರ್ ಶ್ರೀ ವಿಜಯ ಕುಮಾರ್ ಕಪೂರ್ ಇವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇವರು ತಮ್ಮ ಭಾಷಣದಲ್ಲಿ ಕೊಂಕಣಿ ಭಾಷೆಯ ಸಾಹಿತ್ಯ ಕಲೆಗಳ ಅಭಿವೃದ್ಧಿಗಾಗಿ ದೆಹಲಿಯಲ್ಲಿ ಭವನವನ್ನು ರಚಿಸುವುದರಲ್ಲಿ ಅದಕ್ಕೆ ಬೇಕಾದ ಸ್ಥಳವನ್ನು ಒದಗಿಸುವುದಾಗಿ ಘೋಷಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆಯ ಮಂತ್ರಿ ಶ್ರೀ ಸುರೇಶ ಪ್ರಭು ಇವರು ವಿಶ್ವ ಕೊಂಕಣಿ ಸಮ್ಮೇಳನದಲ್ಲಿ ಭಾಗವಹಿಸಿದ ಸವಿನೆನಪು ನೆನಪಿಸಿದರು, ಹಾಗೂ ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ ಲೋಕವೇದ ನೃತ್ಯ ಸಂಗೀತಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದಾಗಿ ಹೇಳಿ ಕಲಾವಿದರುಗಳಿಗೆ ಹಾರ ಹಾಕಿ ಗೌರವಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ ಇವರು ಕೊಂಕಣಿ ಸಂಸ್ಕೃತಿ ಕರ್ನಾಟಕದ ಅವಿಭಾಜ್ಯ ಅಂಗ. ಕರ್ನಾಟಕ ಸರಕಾರವು ಒಟ್ಟು 10 ಅಕಾಡೆಮಿಗಳನ್ನು ನೀಡಿದೆ. ಎಲ್ಲವೂ ಉತ್ತಮ ಸಾಧನೆಗಳನ್ನು ಮಾಡಿ ತೋರಿಸಿವೆ. ಸಾಹಿತ್ಯವಾದರೂ ಸಂಸ್ಕೃತಿಯ ಇರುವಿಕೆಯ ಮೇಲೆ ಹೊಂದಿರುತ್ತದೆ. ಸಂಸ್ಕೃತಿಯನ್ನು ಹಾಗೂ ಇತರ ಪ್ರಕಾರಗಳನ್ನು ಕಾಪಾಡಿಕೊಂಡು ಬರಬೇಕೆಂದು ತಿಳಿಸಿದರು.

ನಂತರ ಮಂಗಳೂರಿನ ಎಡಪದವಿನ ಕುಡುಂಬಿ ಜಾನಪದ ಕಲಾ ವೇದಿಕೆ ಕಲಾ ತಂಡವು ಶ್ರೀ ಗೋಪಾಲ ಗೌಡರ ನೇತೃತ್ವದಲ್ಲಿ ಕುಡುಬಿ ಹಾಡು, ಕುಣಿತ ಮತ್ತು ಶ್ರೀ ಅಂತೋನ್ ಸಿದ್ದಿಯವರ ನೇತೃತ್ವದಲ್ಲಿ ದಮಾಮ್ ಧಪ್, ಫುಗುಡಿ ಸಂಗೀತ ನೃತ್ಯಗಳು, ಹಾಗೂ ಉಪ್ಪಿನಕುದ್ರು ದೇವಣ್ಣ ಕೊಗ್ಗ ಕಾಮತ್ ಕಲಾ ತಂಡದವರಿಂದ ಬೊಂಬೆಯಾಟದಲ್ಲಿ 'ಲಂಕಾ ದಹನ' ಪ್ರಸಂಗವನ್ನು ಆಡಿಸಿ ಜನರಿಗೆ ಮನರಂಜನೆ ನೀಡಿದರು.

ಸೆಪ್ಟೆಂಬರ್ 5ರಂದು ಜರುಗಿದ ಕಾರ್ಯಕ್ರಮಕ್ಕೆ ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರು ಮುಖ್ಯ ಅತಿಥಿಯಾಗಿ ಬಂದು ಕಲಾವಿದರುಗಳನ್ನು ಹೂ ಹಾರ ಹಾಕಿ ಗೌರವಿಸಿದರು. ಶ್ರೀಮತಿ ಅನುರಾಧ ಧಾರೇಶ್ವರ್, ಶ್ರೀಮತಿ ವಸಂತಿ ಆರ್. ನಾಯಕ್, ಶ್ರೀ ಎರಿಕ್ ಒಜಾರಿಯೋ ಮತ್ತು ಬಳಗದವರಿಂದ ಸುಗಮ ಸಂಗೀತ ಹಾಗೂ ಬಾಯ್ಲಾ ಕುಣಿತ ಕಾರ್ಯಕ್ರಮವನ್ನು ಹಾಗೂ ಶ್ರೀ ಜೋಕಿಂ ಪಿರೇರಾ ಇವರಿಂದ ಕ್ರಿಶ್ಚಿಯನ್ ಗುಮಟಾ ಕಾರ್ಯಕ್ರಮ, ಸಿದ್ಧಾಪುರದ ಹರ್ಷಿಕಟ್ಟೆ ಕೊಂಕಣಿ ಯಕ್ಷಗಾನ ಮಂಡಳಿ ಇವರಿಂದ ಕೊಂಕಣಿಯಲ್ಲಿ ಬಾಲ ಯಕ್ಷಗಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸೆಪ್ಟೆಂಬರ್ 6ರ ಕೊನೆಯ ದಿನದ ಸಮಾರೋಪ ಸಮಾರಂಭದಲ್ಲಿ ಶಿರಸಿಯ ಕೊಂಕಣಿ ಕಲಾ ಮಂಡಳಿಯ ಶ್ರೀ ವಾಸುದೇವ ಶಾನುಭಾಗ ಇವರ ನೇತೃತ್ವದಲ್ಲಿ ಶ್ರೀ ಕೃಷ್ಣ ಪಾರಿಜಾತ ನೃತ್ಯ ರೂಪಕ, ಕುಂದಾಪುರ ವಿದ್ಯಾರಂಗ ಮಿತ್ರಮಂಡಳಿ ಇವರಿಂದ ಖಾರ್ವಿಗಳ ಜಾನಪದ ನೃತ್ಯ ಕೋಲಾಟಗಳನ್ನು ಏರ್ಪಡಿಸಲಾಗಿತ್ತು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಅಸ್ತಿತ್ವಕ್ಕೆ ಬರಲು ಕಾರಣಕರ್ತರಾದ ಬೆಂಗಳೂರಿನ ಶ್ರೀ ರೊನಾಲ್ಡ್ ಕುಲಾಸೋ ಇವರನ್ನು ಭಾರತ ರೈಲ್ವೇ ಮಂಡಳಿ ನಿಕಟಪೂರ್ವ ಅಧ್ಯಕ್ಷರಾದ ಕೊಂಕಣಿ ಮಾತೃ ಭಾಷೆಯ ಶ್ರೀ ಎಂ. ರವೀಂದ್ರರು ಶಾಲು ಹೊದಿಸಿ ಸ್ಮರಣಿಕೆಯನ್ನು ಇತ್ತು ಹೂಹಾರ ಹಾಕಿ ಗೌರವಿಸಿದರು. ಸಮಾರೋಪ ಸಮಾರಂಭದ ಕೊನೆಯಲ್ಲಿ ಸಂಚಾಲಕರಾದ ಕೆ. ಗೋಪಾಲ್‌ರವರು ಕ್ರಿ.ಶ. 2000 ಇಸವಿಯಲ್ಲಿ 2ನೇ ಕೊಂಕಣಿ ವಿಶ್ವಸಮ್ಮೇಳನವು ಹೊಸ ದೆಹಲಿಯಲ್ಲಿ ನಡೆಯಲಿ ಎಂದು ಹೊಸ ದೆಹಲಿ ಕೊಂಕಣಿ ಬಾಂಧವರ ಪರವಾಗಿ ಆತ್ಮೀಯ ಆಮಂತ್ರಣ ನೀಡಿದರು. ದೆಹಲಿಯಲ್ಲಿ ಜರುಗಿದ ಕೊಂಕಣಿ ಕಲಾ ಉತ್ಸವದ ಕಾರ್ಯಕ್ರಮವನ್ನು ಬೆಂಗಳೂರಿನ ದೂರದರ್ಶನದ ಡಿ.ಡಿ. 9ರಲ್ಲಿ ಮೂರು ಕಂತುಗಳಲ್ಲಿ ಪ್ರಸಾರ ಮಾಡಲಾಯಿತು. ಕೊಂಕಣಿ ಕಲಾ ಉತ್ಸವದ ಸಂದರ್ಭದಲ್ಲಿ ದೆಹಲಿ ಸಂಘ–ಸಂಸ್ಥೆಗಳು ಕೊಂಕಣಿಯ ಖಾಣ್ ಜೆವಾಣ್ ಪರಬ್ ಏರ್ಪಡಿಸಿದರು. ಮಂಗಳೂರಿನ ತಿಂಡಿ–ತಿನಸುಗಳ ಸರಬರಾಜುದಾರರಾದ ಶ್ರೀ. ಕೆ. ಪ್ರಕಾಶ್ ಪ್ರಭುರವರು ಕೊಂಕಣಿ ಜನರ 93 ಬಗೆಯ ವಿವಿಧ ವಿಶೇಷ ಅಡಿಗೆಗಳನ್ನು ಊಣ ಬಡಿಸಿದರು.

ದೆಹಲಿ ಕಲೋತ್ಸವದಲ್ಲಿ ವಾರ್ತಾ ಪ್ರಚಾರ ಇಲಾಖೆಯ ಅಧಿಕಾರಿ ಶ್ರೀ ಆರ್. ನಾಗೇಶ್ ಮತ್ತು ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಸ್ತಿ ವಾಮನ ಶೆಣೈ, ಸಂಚಾಲಕರಾಗಿ ಅಕಾಡೆಮಿ ಸದಸ್ಯರುಗಳಾದ ಶ್ರೀ ಎಲ್. ವಿ. ಅಂದ್ರಾದೆ, ಶ್ರೀಮತಿ ಲತಾ ಯು. ಪೈ, ಗೋಪಾಲ ಗೌಡ, ಶ್ರೀ ಮಿಂಗೆಲ್ ಅಂತೋನಿ ಸಿದ್ಧಿ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಚ್. ಸಿ. ರಂಗಪ್ಪ ಇವರುಗಳು ಉಪಸ್ಥಿತರಿದ್ದರು.

'ಆಮಿ ಕೊಂಕಣಿ ಲೋಕ್' ಕಾರ್ಯಕ್ರಮ ಈ ಯೋಜನೆಯ ಉದ್ದೇಶ: ಕರ್ನಾಟಕದ ಮೂಲೆ ಮೂಲೆಯಲ್ಲಿರುವ ವಿವಿಧ ಪಂಗಡಗಳಲ್ಲಿ ವಿವಿಧ ರೀತಿಯಲ್ಲಿ ಕೊಂಕಣಿ

ಮಾತನಾಡುವ ಜನರಲ್ಲಿ ವಿವಿಧ ಜಾತಿ ಧರ್ಮಗಳನ್ನು ಹೊಂದಿರುತ್ತಾರೆ. ಈ ವಿವಿಧತೆಯಲ್ಲಿ ಏಕತೆಯನ್ನು ತೋರಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದ ವಿವರಗಳು :

ಮೂರು ಹಂತಗಳಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

(1) **ಆಮ್ಗೆಲೆ ದಿವಸ್** : ಬೇರೆ ಪಂಗಡಗಳಿಗೆ ಪಂಗಡದ–ಸಮುದಾಯದ ಪರಿಚಯ ಮಾಡಿಕೊಡುವ ಬಗ್ಗೆ.

(2) **ಸಂಶೋಧನೆ** : ಪಂಗಡಗಳ ಬಗ್ಗೆ ಎರಡು ತಿಂಗಳಲ್ಲಿ ವೈಜ್ಞಾನಿಕ ಸಂಶೋಧನೆಯನ್ನು ಸಂಗ್ರಹ ಮಾಡುವುದು.

(3) **ಪುಸ್ತಕ** : ಸಂಶೋಧನೆ ಮಾಡಿ ಸಂಗ್ರಹಿಸಿದ ವಿವರಗಳನ್ನು ಪುಸ್ತಕ ರೂಪದಲ್ಲಿ ಹೊರತರುವುದು.

ಈ ಕಾರ್ಯಕ್ರಮವನ್ನು ಪ್ರಪ್ರಥಮವಾಗಿ ಬೆಳಗಾವಿಯಲ್ಲಿ ಜರುಗಿಸಲಾಯಿತು.

ದಿನಾಂಕ 6–10–96ರಂದು ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಭವನದ ಸಭಾಂಗಣದಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಬೆಳಗಾಂ ಕೊಂಕಣಿ ಸಾಹಿತ್ಯ ಪರಿಷತ್ ಇವರೊಂದಿಗೆ 'ಆಮಿ ಕೊಂಕಣಿ ಲೋಕ್' – ಆಮಿ ಜಿ. ಎಸ್. ಬಿ. ಲೋಕ್ – ಆಮ್ಗೆಲೆ ದಿವಸ್ ಆಚರಣೆ ಜರುಗಿತು.

ಈ ಕಾರ್ಯಕ್ರಮವನ್ನು ಬೆಳಗಾವಿಯ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಯವರು ಉದ್ಘಾಟಿಸಿದರು. ಶ್ರೀ ಎರಿಕ್ ಒಜಾರಿಯೋ ಪ್ರಸ್ತಾವನೆ ಮಾಡಿದರು.

ನಾವು ಯಾವ ಜನ:

ಈ ಗೋಷ್ಠಿಯಲ್ಲಿ (1) ನಮ್ಮ ಕುರಿತು, ನಮ್ಮ ಜನ, ನಮ್ಮ ಇತಿಹಾಸ ಎಂಬ ವಿಷಯದ ಬಗ್ಗೆ ಶ್ರೀ ಜಿ. ವಿ. ಶೆಣೈ ಧಾರವಾಡ ಇವರು ಪ್ರಬಂಧ ಮಂಡನೆ ಮಾಡಿದರು. (2) ನಮ್ಮ ಧರ್ಮ, ಆಚರಣೆ ರೀತಿ, ನೀತಿ, ಹಬ್ಬ, ಹುಣ್ಣಿಮೆ ಈ ವಿಷಯದ ಬಗ್ಗೆ ಶ್ರೀ ಕೆ. ಎಸ್. ರಾವ್ ದಾಂಡೇಲಿ ಇವರು ಪ್ರಬಂಧ ಮಂಡಿಸಿದರು. (3) ನಮ್ಮ ಕಲೆ ಮತ್ತು ಸಂಸ್ಕೃತಿ ಜಾನಪದ ಸಾಹಿತ್ಯ ಸಂಗೀತ, ನಾಟಕ, ನೃತ್ಯ ಸಾಹಿತ್ಯ ಊಟ ಉಪಹಾರ ವೇಷ ಭೂಷಣ ಈ ವಿಷಯದ ಬಗ್ಗೆ ಶ್ರೀ ಹೆಚ್. ರಾಘವೇಂದ್ರ ರಾವ್ ಮಂಗಳೂರು ಇವರು ಪ್ರಬಂಧ ಮಂಡಿಸಿದರು.

ಕೊಂಕಣಿ ಮತ್ತು ಸಮಸ್ತ ಸಮಾಜಕ್ಕೆ ನೀಡಿದ ವಿಶೇಷ ದೇಣಿಗೆ ಈ ವಿಷಯದ ಬಗ್ಗೆ ಶ್ರೀ ಮುಕುಂದ ಪ್ರಭು ಮಂಗಳೂರು ಇವರು ಪ್ರಬಂಧ ಮಂಡಿಸಿದರು. ನಮ್ಮ ಮಹಾನ್ ಜನ ಮತ್ತು ಅವರ ಸಾಧನೆ ಈ ವಿಷಯದ ಬಗ್ಗೆ ಶ್ರೀ ಶಾ. ಮಂ. ಕೃಷ್ಣರಾಯ ಗೋವಾ

ಇವರು ಪ್ರಬಂಧ ಮಂಡಿಸಿದರು. ಪ್ರಶ್ನೆ-ಉತ್ತರ ವಿವರಣೆ ಈ ಕಾರ್ಯಕ್ರಮದಲ್ಲಿ ನಮ್ಮ ಭವಿಷ್ಯ, ಸಮಸ್ಯೆ ಮತ್ತು ನಿರ್ಧಾರ ಇದರ ಬಗ್ಗೆ ಚರ್ಚೆ ನಡೆಯಿತು. ನಂತರ ನಮ್ಮ ಸಂಸ್ಕೃತಿ ಇದರಲ್ಲಿ ಜಿ. ಎಸ್. ಬಿ. ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊಂಕಣಿ ಸಾಹಿತ್ಯ ಪರಿಷತ್‌ನ ಸದಸ್ಯರು ಸಾಧರ ಪಡಿಸಿದರು.

ಆಮಿ ಕೊಂಕಣಿ ಲೋಕ್ - ಆಮಿ ನವಾಯತ್ ಲೋಕ್:

ಆಮಿ ಕೊಂಕಣಿ ಲೋಕ್ ಜನಾಂಗೀಯ ಕಾರ್ಯಕ್ರಮದಲ್ಲಿ 'ನಾವು ಕೊಂಕಣಿ ಜನ ನಾವು ನವಾಯತ್ ಜನ' ಎಂಬ ಒಂದು ದಿನದ ಕಾರ್ಯಕ್ರಮವನ್ನು ಭಟ್ಕಳದ ನ್ಯೂ ಆಂಗ್ಲ ಶಾಲೆಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಮಂಡಲ ಭಟ್ಕಳ ಇವರ ಸಹಯೋಗದಲ್ಲಿ ದಿನಾಂಕ 24-11-96ರಂದು ಭಟ್ಕಳದಲ್ಲಿ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸ್ತಿ ವಾಮನ ಶೆಣೈಯವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಜಯರಾಮ ಕೊಲ್ಲೆಯವರು ವಹಿಸಿದ್ದರು. 'ನಾವು ಯಾವ ಜನ' ಕಾರ್ಯಶಾಲೆಯಲ್ಲಿ ನಮ್ಮ ಕುರಿತು 'ನಮ್ಮ ಜನ ನಮ್ಮ ಇತಿಹಾಸ' ಈ ವಿಷಯದ ಬಗ್ಗೆ ಶ್ರೀ ಅಪ್ತಾಬ್ ಹುಸೇನ್ ಕೋಲಾ ಇವರು ವಿಷಯ ಮಂಡನೆ ಮಾಡಿದರು. ನಮ್ಮ ಧರ್ಮ ಆಚರಣೆ ರೀತಿ ರಿವಾಜ ಹಬ್ಬ ಹುಣ್ಣಿಮೆ ಈ ವಿಷಯದ ಬಗ್ಗೆ ಶ್ರೀ ಮೌಲ್ವಿ ಆಲಿಸುಕ್ರಿ ಅಕ್ರಾಮಿ ವಿಷಯ ಮಂಡಿಸಿದರು. ನಮ್ಮ ಕಲೆ, ಸಂಸ್ಕೃತಿ ಜಾನಪದ ಸಂಗೀತ, ನಾಟಕ, ನೃತ್ಯ, ಊಟ ಉಪಚಾರ, ವೇಷ-ಭೂಷಣ ಇತ್ಯಾದಿ ಈ ವಿಷಯಗಳ ಬಗ್ಗೆ ಶ್ರೀ ಕೋಟೇಶ್ವರ ಅಬ್ದುಲ್ ಖಯ್ಯೂಮ್ ಇವರು ಪ್ರಬಂಧ ಮಂಡಿಸಿದರು. ನವಾಯತ ಕೊಂಕಣಿ ಮತ್ತು ಸಮಸ್ತ ಸಮಾಜಕ್ಕೆ ನೀಡಿದ ವಿಶಿಷ್ಟ ದೇಣಿಗೆ ಇದರ ಬಗ್ಗೆ ಶ್ರೀ ಜಫರ್ ಆಲಿ ಮೌಲಿಂಗ್ ಇವರು ಪ್ರಬಂಧ ಮಂಡಿಸಿದರು. ನಮ್ಮ ಮಹಾನ್ ಜನ ಮತ್ತು ಅವರ ಸಾಧನೆ ಈ ವಿಷಯದ ಬಗ್ಗೆ ಶ್ರೀ ಬದ್ರುಲ್ ಹಾಸನ್ ಮೌಲ್ ಪ್ರಬಂಧ ಮಂಡಿಸಿದರು. ನಂತರ ಪ್ರಶ್ನೋತ್ತರ ವಿವರಣೆಗಳ ಮಂಡನೆಯಾಯಿತು. ನಮ್ಮ ಭವಿಷ್ಯ ಮತ್ತು ನಿರ್ಧಾರದ ಬಗ್ಗೆ ಚರ್ಚೆ ನಡೆಯಿತು. ಬಳಿಕ ಭಟ್ಕಳ ಕೊಂಕಣಿ ಮಂಡಲದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಆಮಿ ಕೊಂಕಣಿ ಲೋಕ್ - ಆಮಿ ಸಿದ್ಧಿ ಲೋಕ್ :

ಈ ಕಾರ್ಯಕ್ರಮವನ್ನು ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಸಿದ್ಧಿ ಅಭಿವೃದ್ಧಿ ಯೋಜನೆ ಯಲ್ಲಾಪುರದ ವೈ. ಟಿ. ಎಸ್. ಎಸ್. ಜ್ಯೂನಿಯರ್ ಕಾಲೇಜಿನ ಸಭಾಂಗಣದಲ್ಲಿ 8-2-1997ರಂದು ಏರ್ಪಡಿಸಲಾಯಿತು. ಈ ಕಾರ್ಯಕ್ರಮವನ್ನು ಡಾ। ಲಿಯೋನಿಲ್ಲಾ ಅಗೇರಾ ಬೆಂಗಳೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ. ವಿ. ಬಾಳಿಗಾ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಬಿ. ವಿ. ಮಂತ್ರಿ ಇವರು ಭಾಗವಹಿಸಿದ್ದರು. ಜೊತೆಗೆ ಮಿಂಗೆಲ್ ಅಂತೋನಿ ಸಿದ್ಧಿ, ಶ್ರೀ ಶಿವಸಣ್ಣ ಸಿದ್ಧಿ, ಶ್ರೀ ಹುಸೇನ್ ಸಾಬ್,

ಅಲ್ಲಿಸಾಬ್ ಸಿದ್ದಿ ಮುಖ್ಯ ಅತಿಥಿಗಳಾಗಿದ್ದರು. ನಮ್ಮ ಇತಿಹಾಸ ಈ ವಿಷಯದಲ್ಲಿ ಶ್ರೀ ಕೃಷ್ಣ ಸಿದ್ದಿಯವರು ಪ್ರಬಂಧ ಮಂಡಿಸಿದರು. ನಮ್ಮ ಆಚಾರ ವಿಚಾರ ಇದರ ಬಗ್ಗೆ ಶ್ರೀ ಶಾಂತರಾಂ ಸಿದ್ದಿ ಪ್ರಬಂಧ ಮಂಡಿಸಿದರು. ನಮ್ಮ ಆರ್ಥಿಕ ಪರಿಸ್ಥಿತಿ ಇದರ ಬಗ್ಗೆ ಶ್ರೀ ವಿಯೇಗ್ ಜಿ ಸಿದ್ದಿ ಪ್ರಬಂಧ ಮಂಡಿಸಿದರು. ನಮ್ಮ ಸಂಸ್ಕೃತಿಯ ಬಗ್ಗೆ ಮಹಮದ್ ಹುಸೇನ್ ಸಿದ್ದಿ ಪ್ರಬಂಧ ಮಂಡಿಸಿದರು. ನಮ್ಮ ಮಹಾನ್ ಪುರುಷರು ಈ ವಿಷಯದ ಬಗ್ಗೆ ಶಿವಾನಂದ ಸಿದ್ದಿ ಪ್ರಬಂಧವನ್ನು ಮಂಡಿಸಿದರು. ನಂತರ ಅಕಾಡೆಮಿ ವತಿಯಿಂದ ವಿಚಾರ ಸಂಕಿರಣ ನಡೆಯಿತು. ಕಾರ್ಯಕ್ರಮದ ಕೊನೆಯಲ್ಲಿ ಸಿದ್ದಿ ಜನಾಂಗದ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ದೈವಜ್ಞ ಜನಾಂಗದವರಿಂದ ಆಮಿ ದೈವಜ್ಞ ಲೋಕ್ :

ಆಮಿ ಕೊಂಕಣಿ ಲೋಕ್ ಆಮಿ ದೈವಜ್ಞ ಲೋಕ್ ಕಾರ್ಯಕ್ರಮವನ್ನು ದಿನಾಂಕ 2-11-97ರಂದು ದೈವಜ್ಞ ಕಲ್ಯಾಣ ಮಂಟಪ ಅಗಸೆ ಬಾಗಿಲು ಶಿರಸಿಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ದೈವಜ್ಞ ಬ್ರಾಹ್ಮಣ ಸಮಾಜ ಶಿರಸಿ ಇವರ ಸಹಯೋಗದ ಮೇರೆಗೆ ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳಾದ ಮಾನ್ಯ ಶ್ರೀ ಆರ್. ವಿ. ದೇಶಪಾಂಡೆ ಅವರಿಂದ ಉದ್ಘಾಟನೆ ಮಾಡಲಾಯಿತು. ಶ್ರೀಮಾನ್ ಪ್ರೇಮಾನಂದ, ಎಸ್. ಜಯವಂತ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಶ್ರೀಮಾನ್ ವಿಶ್ವೇಸರ ಹೆಗಡೆ, ಕಾಗೇರಿ, ಪಿ. ಎಸ್. ನೋಂಡೆ, ಬಿ. ಎಸ್. ಶಾಂತರಾಮ್, ಎಂ. ಮೋಹನ್ ಶೇಟ್ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಬಸ್ತಿ ವಾಮನ ಶೆಣ್ಯೆಯವರು ಕೊಂಕಣಿ ಅಕಾಡೆಮಿಯ ವಿವಿಧ ಯೋಜನೆಗಳ ಕುರಿತಾಗಿ ಮಾಹಿತಿಯನ್ನು ಇತ್ತರು. ವಿಚಾರ ಸಂಕಿರಣದ ಅಧ್ಯಕ್ಷರಾಗಿ ನಾರಾಯಣ ಜಿ. ಕೊಲ್ಲೆ ಭಾಗವಹಿಸಿದ್ದರು.

(1) ದೈವಜ್ಞ ಬ್ರಾಹ್ಮಣ ಇತಿಹಾಸ : ಈ ವಿಷಯದಲ್ಲಿ ಆರ್. ಜಿ. ರಾಯ್ಕರ್ ಪ್ರಬಂಧ ಮಂಡಿಸಿದರು.

(2) ನಮ್ಮ ಧರ್ಮಾಚರಣೆ ಮತ್ತು ಹಬ್ಬ ಹರಿದಿನಗಳು : ಎಂಬ ವಿಷಯದ ಬಗ್ಗೆ ಆರ್. ಎಂ. ಶೇಟ್ ಹಳದೀಪುರ ಇವರು ಪ್ರಬಂಧ ಮಂಡಿಸಿದರು.

(3) ನಮ್ಮ ಸಮಾಜದ ಪ್ರತಿಭಾವಂತ ಜನ : ಎಂಬ ವಿಷಯದ ಬಗ್ಗೆ ಬಿ. ಹೆಚ್. ಸಾನು ಇವರು ಪ್ರಬಂಧ ಮಂಡಿಸಿದರು.

(4) ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರತಿಭಾವಂತ ದೈವಜ್ಞ ಬ್ರಾಹ್ಮಣ : ಈ ವಿಷಯದ ಬಗ್ಗೆ ಡಾ। ಡಿ. ಎಸ್. ರಾಯ್ಕರ್ ಮಾತನಾಡಿದರು.

(5) **ನಮ್ಮ ಕಲೆ ಮತ್ತು ಸಂಸ್ಕೃತಿ :** ಎಂಬ ವಿಷಯದ ಬಗ್ಗೆ ಬಿ. ಎನ್. ಶೇಟ್ ಇವರು ಪ್ರಬಂಧ ಮಂಡಿಸಿದರು.

(6) **ದೈವಜ್ಞ ಸಮಾಜದರು ಮಾಡಿದ ಸಮಾಜ ಸೇವೆ :** ಈ ವಿಷಯದ ಬಗ್ಗೆ ಡಾ। ಸಚ್ಚಿದಾನಂದ ಶಿರೋಡಕರ ಪ್ರಬಂಧ ಮಂಡನೆಯನ್ನು ಮಾಡಿದರು.

(7) **ವಿವಿಧ ಹುದ್ದೆಯಲ್ಲಿರುವ ನಮ್ಮ ಜನ :** ಈ ವಿಷಯದ ಬಗ್ಗೆ ಶ್ರೀ ರಮೇಶ್ ಎಸ್. ಶೇಟ್ ಮಾತಾನಾಡಿದರು.

(8) **ನಮ್ಮ ದೇವಾಲಯ ಮತ್ತು ಕಲ್ಯಾಣ ಮಂಟಪಗಳು :** ಈ ವಿಷಯದ ಮೇಲೆ ಮಾತನಾಡಿದವರು ಶ್ರೀ ಆರ್. ಎಂ. ಶೇಟ್ ಅಂಕೋಲಾ.

(9) **ವೈದಿಕ ಕ್ಷೇತ್ರದಲ್ಲಿ ದೈವಜ್ಞ ಸಮಾಜದವರು :** ಎಂಬ ವಿಷಯದ ಬಗ್ಗೆ ಶ್ರೀ ರಾಮ ಚಂದ್ರ ಭಟ್ ಪ್ರಬಂಧ ಮಂಡಿಸಿದರು.

(10) **ಕೈಗಾರಿಕಾ ಕ್ಷೇತ್ರದಲ್ಲಿ ದೈವಜ್ಞ ಬ್ರಾಹ್ಮಣರ ಪಾತ್ರ :** ಎಂಬ ವಿಷಯದ ಬಗ್ಗೆ ಶ್ರೀ ಜಯರಾಮ ಜಿ. ಕೊಲ್ಲೆ ಇವರು ಪ್ರಬಂಧ ಮಂಡಿಸಿದರು. ನಮ್ಮ ಜಾನಪದ ಸಂಗೀತ ನಾಟಕ, ನೃತ್ಯ ಈ ವಿಷಯದ ಬಗ್ಗೆ ನಿರ್ಮಲ ಪಿ. ಶೇಟ್ ಇವರು ವಿಚಾರ ಮಂಡನೆ ಮಾಡಿದರು. ನಂತರ ಶಿರಸಿ ದೈವಜ್ಞ ಮಹಿಳಾ ಮಂಡಳಿ ಮತ್ತು ದೈವಜ್ಞ ಯುವಕ ಮಂಡಳಿಯವರಿಂದ ನಾಟಕ, ಸಂಗೀತ, ನೃತ್ಯ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು ಈ ಕಾರ್ಯಕ್ರಮದ ನಂತರ ದೈವಜ್ಞ ಸಮಾಜಕ್ಕೆ ಸಂಬಂಧಿಸಿದ ಕಲಾ, ಕೊಂಕಣಿ ಪತ್ರಿಕೆ ಮತ್ತು ಸುವರ್ಣರಜಿತ ಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಪ್ರಶಸ್ತಿ ಪ್ರದಾನ ಸಮಾರಂಭ :

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಂಕಣಿ ಸಾಹಿತ್ಯ, ಸಂಗೀತ, ನಾಟಕ ಲೋಕವೇದ ಮತ್ತು ಪತ್ರಗಾರಿಕೆ ಪ್ರಶಸ್ತಿಗಳನ್ನು ನೀಡಲಾಗಿದೆ.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ 95–96ನೇ ಪ್ರಶಸ್ತಿ ಪ್ರಧಾನ ಸಮಾರಂಭವು 23–6–96ರಂದು ಮಂಗಳೂರಿನ ಡಾನ್ ಬಾಸ್ಕೋ ಹಾಲ್‌ನಲ್ಲಿ ಸಂಜೆ 6.00 ಗಂಟೆಗೆ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಂಕಣಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ. ಬಿ. ವಿ. ಬಾಳಿಗಾರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮಂಗಳೂರಿನ ಶಾಸಕ ಶ್ರೀ ಎನ್. ಯೋಗೀಶ್ ಭಟ್‌ರವರು ಭಾಗವಹಿಸಿದ್ದರು. ಇವರು ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ ಶ್ರೀ ಎ. ಟಿ. ಲೋಬೊ ಮಂಗಳೂರು ಮತ್ತು ಸಂಗೀತ ಕ್ಷೇತ್ರದಲ್ಲಿ

ವಿಶೇಷವಾಗಿ ಸೇವೆ ಸಲ್ಲಿಸಿದ ಶ್ರೀ ವಿಲ್ಫಿ ರೆಬಿಂಬಸ್ ಮಂಗಳೂರು, ನಾಟಕ ಕ್ಷೇತ್ರದಲ್ಲಿ ಉತ್ತರ ಕರ್ನಾಟಕದ ನಾಟಕಕಾರ ಶ್ರೀ ಹೊಸಾಡ ಬಾಬುಟಿ ನಾಯಕ್, ಹೊಸಾಡ, ಜಾನಪದ ಕ್ಷೇತ್ರದಲ್ಲಿ ದುಡಿದ ಹಳಿಯಾಳದ ಫಾ| ಸಿ. ಸಿ. ಎ. ಪೈ (ಸ್ವಾಮಿ ಸುಪ್ರಿಯ) ಮತ್ತು, ಪತ್ರಿಕೋದ್ಯಮದಲ್ಲಿ ಭಟ್ಕಳದ ಶ್ರೀ ಅಬ್ದುಲ್ ರಹೀಮ್ ಹರ್ಷಾದ್ ಇವರಿಗೆ ರೂ. 5000–00 ಗೌರವ ಸಂಭಾವನೆ, ಸ್ಮರಣಿಕೆ, ಫಲ ತಾಂಬೂಲ ಶಾಲು ಹೊದಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನ 1996–97:

ಈ ಕಾರ್ಯಕ್ರಮವು ದಿನಾಂಕ 16–2–97ರಂದು ಸಂಜೆ 5.30ಕ್ಕೆ ಉಡುಪಿಯ ಡಾನ್ ಬಾಸ್ಕೋ ಹಾಲ್‌ನ ಮೈದಾನದಲ್ಲಿ ಜರುಗಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಖ್ಯಾತ ಸಾಹಿತಿಗಳು ಮತ್ತು ಬರಹಗಾರ ಶ್ರೀ ನಾ. ಡಿಸೋಜಾ ಇವರು ಭಾಗವಹಿಸಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ ವಿ. ಜೆ. ಪಿ. ಸಲ್ದಾನ್ಹಾ, ಮಂಗಳೂರು, ಸಂಗೀತ ಕ್ಷೇತ್ರದಲ್ಲಿ ಶ್ರೀಮತಿ ಅನುರಾಧ ಧಾರೇಶ್ವರ, ನಾಟಕ ಕ್ಷೇತ್ರದಲ್ಲಿ ಶ್ರೀ ಬಾಲಕೃಷ್ಣ ಪೈ, ಜಾನಪದ ಕ್ಷೇತ್ರದಲ್ಲಿ ಶ್ರೀ ಸಂತ ಭದ್ರಗಿರಿ ಅಚ್ಯುತದಾಸ್ ಪತ್ರಿಕೋದ್ಯಮದಲ್ಲಿ ಮೊ| ಅಲೆಗ್ಸಾಂಡರ್ ಎಫ್. ಡಿಸೋಜಾ ಇವರುಗಳಿಗೆ ರೂ. 10,000.00ಗಳ ಗೌರವ ಧನದೊಂದಿಗೆ ಸ್ಮರಣಿಕೆ, ಪ್ರಮಾಣ ಪತ್ರ, ಫಲ ತಾಂಬೂಲ, ಶಾಲೂ ಹೊದಿಸಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿ ಪ್ರದಾನ 1997–98 :

ಈ ಕಾರ್ಯಕ್ರಮವನ್ನು ದಿನಾಂಕ 28–12–97ರಂದು ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಇಂಜನಿಯರ್ ಸಭಾಂಗಣದಲ್ಲಿ ಜರುಗಿತು. ಮುಖ್ಯ ಅತಿಥಿಯಾಗಿ ಮೈಸೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳಾದ ಪ್ರೊ| ದೇ. ಜ. ಗೌ ಇವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀ ಎಡ್ವಿನ್ ಜೆ. ಎಫ್. ಡಿಸೋಜಾ, ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀಮತಿ ವಸಂತಿ ಆರ್. ನಾಯಕ್, ನಾಟಕ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿದ ಶ್ರೀ ಜೆ. ಬಿ. ರಸ್ಕೀನ್ಹಾ, ಜಾನಪದ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀ ವಿಶ್ವನಾಥ ಶೇಟ್ ಸಿದ್ದಾಪುರ, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಶ್ರೀ ಸಿರಿಲ್ ಜೆ. ವೇಗಸ್ ಮೈಸೂರು ಇವರಿಗೆ ರೂ 10,000–00 ಗೌರವ ಸಂಭಾವನೆ ಸ್ಮರಣಿಕೆ, ಪ್ರಮಾಣ ಪತ್ರ ಹಣ್ಣು ಹಂಪಲುಗಳೊಂದಿಗೆ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಅಲ್ಲದೆ ಭಾರತ ದೇಶ ಸ್ವಾತಂತ್ರ್ಯದ ಮಹೋತ್ಸವದ ವಿಶೇಷ ಪ್ರಶಸ್ತಿಯನ್ನು ದೇಶ ಭಕ್ತ ಸ್ವಾತಂತ್ರ್ಯ ಹೋರಾಟಗಾರ ಕೊಂಕಣಿ ಸಾಹಿತಿ ಶ್ರೀ ಕೆ. ಎನ್. ರಾವ್ ದಾಂಡೇಲಿ ಇವರಿಗೆ ನೀಡಲಾಯಿತು.

ವಿದ್ಯಾಕ್ಷೇತ್ರದಲ್ಲಿ ಕೊಂಕಣಿ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ಸಂತ ಎಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಿ ಪ್ರೋತ್ಸಾಹ ನೀಡಲಾಗಿದೆ.

ಮಂಗಳೂರಿನಲ್ಲಿ 1997ರ ಡಿಸೆಂಬರ್ ತಿಂಗಳಲ್ಲಿ ಜರುಗಿದ ಅಖಿಲ ಭಾರತ 66ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೊಂಕಣಿ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಹಯೋಗ ನೀಡಲಾಗಿದೆ.

ಮಂಗಳೂರಿನಲ್ಲಿ ಜರುಗಿದ ದ. ಕ. ಜಿಲ್ಲಾ ಕರಾವಳಿ ಉತ್ಸವದಲ್ಲಿ ಕೊಂಕಣಿಯ ಗುಮ್ಮಾ ಮತ್ತು ಸಂಗೀತ ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಯೋಜನೆಯಡಿ ನಿರ್ಮಿಸಿರುವ ಕನ್ನಡ ಭವನದ ಶಿಲ್ಪವನಕ್ಕಾಗಿ ಅಕಾಡೆಮಿ ವತಿಯಿಂದ ದೇಣಿಗೆ ನೀಡಲಾಗಿದೆ.

ಸದ್ಯದ ಅವಧಿಯಲ್ಲಿ ಶ್ರೀ ಎಚ್. ಸಿ. ರಂಗಪ್ಪ ಇವರು ಪ್ರಭಾರ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಹೊಸ ಚಾಲನೆ ಕೊಟ್ಟ ಶ್ರೀ ರಂಗಪ್ಪನವರು, ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಕಲ ಚಟುವಟಿಕೆಗಳಲ್ಲೂ ಭಾಗವಹಿಸಿ ಕೊಂಕಣಿ ಸಾಹಿತಿಗಳಿಗೂ, ಕಲಾವಿದರಿಗೂ ಸರ್ವ ರೀತಿಯ ಪ್ರೋತ್ಸಾಹ, ಸಹಕಾರಗಳ ನೀಡಿ ಹುರಿದುಂಬಿಸುತ್ತಿರುವುದು ತುಂಬಾ ಸಂತೋಷದ ವಿಚಾರ.

ಜೈ ಕೊಂಕಣಿ!

☆☆☆☆

PRINTED AT CODIALBAIL PRESS, MANGALORE-575003.